Licence No. 60.
Licenced to Post without Prepayment.

Reg. No. M. 1330.
"KODAGU" MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ಕಾರೀಕು ೫-೯-೧೯೫೨ನೇ ಶುಕ್ರವಾರ | ಸಂಚಿಕೆ ೧೪

ಸ್ವಚ್ಛ ಹೃದಯ

ಗಾಂಧೀಜಿಯು ಮೊದಲಾಗಿ ವಿಶ್ವದ ಮಹತ್ಕಾರ್ಯರೆಲ್ಲ ಜನರಿಗೆ ಸತ್ಯಪ್ರಿಯರಾಗಿರಲು ಬೋಧಿಸಿದರು. 'ಸತ್ಯವೇ ದೇವರ' ಎಂಬುದಾಗಿ ಅವರು ಸಾರಿದರು. ಪ್ರತಿಯೊಂದೂ ಧರ್ಮದ ಆದೇಶವು ಸುಳ್ಳನ್ನೂ ಕಪಟವನ್ನೂ ತ್ಯಜಿಸಿ ಸತ್ಯವನ್ನು ಅಡಬೇಕೆಂದಾಗಿತ್ತು. ಇದರಿಂದ ವೈಯಕ್ತಿಕ ಶ್ರೇಯಸ್ಸು ಕೈಗೂಡುವುದಿಂದೂ ಮಾನಸಿಕ ಕ್ಲೇಶವು ತೊಲಗುವುದೆಂದೂ, ಕೂಡ ಬಂದಿದೆ. ಸಾವಿರ ಸುಳ್ಳು ಹೇಳಿದರೂ, ಒಂದಲ್ಲ ಒಂದು ದಿನ ಸತ್ಯ ಸ್ಥಿತಿಯು ತನ್ನಿಂದ ತಾನೇ ಪ್ರಕಟಗೊಳ್ಳುವುದು. ಕಪಟವನ್ನು ಆಶ್ರಯಿಸಿ ಮೋಸ ಮಾಡಲು ಯತ್ನಿಸಿದವನ ಮೇಲೆ ನನ್ನ ವಿಶ್ವಾಸವು ನಿಶ್ಚಯವಾಗಿಯೂ ಹಾರಿ ಹೋಗುವುದು. ಬದುಕು ಸುಗಮವಾಗಬೇಕಾದರೆ ನಮ್ಮ ನಡವಳಿಕೆಗಳು ಸರಳವೂ, ನೇರವಾದುವೂ ಇರುವುದೊಳಿತು. ಸ್ವಚ್ಛ ಹೃದಯದ ಪಾವಿತ್ರ್ಯ ವಾತಾವರಣವನ್ನು ಮಂಗಮಯಗೊಳಿಸುವುದು.

ನಮ್ಮ ಕೋರ್ಟು ಕಛೇರಿಗಳಲ್ಲಿ ನಡೆಯುತ್ತಿರುವ ಸಾವಿರಾರು ವ್ಯವಹರಣೆಗಳ ಮೂಲವು ಅಸತ್ಯ ಮತ್ತು ಕಪಟ ಭಾವಗಳಲ್ಲಿದೆ. ಒಬ್ಬನು ಕಪಟದಿಂದ ವರ್ತಿಸಿದ ಮತ್ತೊಬ್ಬನ ಹೃದಯ ಕೊಳಕಿನಿಂದ ತುಂಬಿತ್ತು. ಹೀಗಾಗಿ ಆಸ್ತಿಯಲ್ಲಿ ವಂಚನೆಯೂ, ಕುತ್ತಿಗೆ ಹಿಚುಕಿ ಕೊಲ್ಲುವುದೂ ನಡೆಯುತ್ತದೆ. ಈಗ ಬಂಧನ ಗೃಹದಲ್ಲಿ ಕೊಳೆಯುತ್ತಿರುವವರಷ್ಟೆ ಅಲ್ಲ; ಕಠಿಣ ದಂಡಕ್ಕೂ ಅವರು ಭಾಗಿಗಳಾಗುವರು. ಆದರೆ ಅಲ್ಲಿರುವ ಪೊಲೀಸರ ಏಟಿಗೂ, ಬೆದರಿಕೆಗೂ ಬಗ್ಗದ ಜನರು ಇದ್ದಾರಲ್ಲವೇ? ಶಿಕ್ಷಾಭಯ ಮತ್ತು ಹೊಡೆತಗಳ ನೋವಿಗೆ ಬಾಯಿ ಬಿಡುವವರೂ ಇದ್ದಾರೆ. ಹಿಂದೆ ಒಂದು ಕಾಲದಲ್ಲಿ ರಾಜದರ್ಬಾರಿನಲ್ಲಿ ಅಪರಾಧಿಗಳ ವಿಚಾರಣೆಯಾಗುತ್ತಿದ್ದಾಗ—ಯಾರಾದರೂ ಅಸತ್ಯ ನುಡಿದದ್ದೆ ಆದರೆ—ರಾಜನ ಸಿಂಹಾಸನವನ್ನು ಹೊತ್ತ ಸಿಂಹಮೂರ್ತಿಗಳು ಘರ್ಜಿಸುತ್ತಿದ್ದುವಂತೆ, ಉಗುರುಗಳನ್ನು ಚಾಚಿ, ಬಾಲವನ್ನು ನೆಲಕ್ಕೆ ಟಪ್ಪನೆ ಬಡಿದು ಅಂಜಿಸುತ್ತಿದ್ದುವಂತೆ. ಇದರಿಂದ ಭಯವಿಹ್ವಲನಾಗಿ ಅಪರಾಧಿ ಸತ್ಯ ಸ್ಥಿತಿಯನ್ನು ಪೂರೆ ಪೂರ್ತಿ ತಿಳಿಸುತ್ತಿದ್ದನು. ಆದರೆ ಸತ್ಯವನ್ನು ಹೊರಗೆಡಹಲು ಈ ಮಾರ್ಗ ಸರಿಯೂದುದೇ ಎಂಬುವುದು ಪ್ರಶ್ನೆ. ಭಯವು ಯಾವಾಗಲು ದುಃಖದಾಯಕವಿದೆ. ಉಗ್ರತಮವಾದ ಶಿಕ್ಷೆಯು ಆಂಜಿಕೆಯುನ್ನು ನೀಡಿದಾಗ—ಮನುಷ್ಯ ಭಯಗೊಂಡು ಆ ಕ್ಷಣಕ್ಕೆ ಸತ್ಯಾನುವರ್ತಿಯಾದಾನೇ ಹೊರತು ಅವನಲ್ಲಿ ಶಾಶ್ವತವಾಗಿ ಸತ್ಯಪ್ರಿಯತೆ ನೆಲೆಗೊಳ್ಳದು.

ಸತ್ಯವನ್ನು ನುಡಿಯುವ ಅಭ್ಯಾಸವನ್ನು ಮಗುವಿಗಾಗಬೇಕಾದರೆ ಪೊಲೀಸರ ಜಾಟಿ ಏಟಾಗಲೀ, ರಾಜ ಸಿಂಹಾಸನದ ಭಯವಾಗಲೀ ಅಗತ್ಯವಿಲ್ಲ. ಸತ್ಯದ ಸಿಂಹಾಸನವು ನಮ್ಮ ಹೃತ್ಕಮಲವೇ ಸೈ. ನಮ್ಮ ಆತ್ಮದಲ್ಲಿ ಸತ್ಯಪ್ರಿಯತೆಯ ಭಾವ ಅಂಕುರಿಸಿದರೆ ಸಾಕು. ನಮ್ಮ ಮಾತನ್ನೂ ಕೃತಿಯನ್ನೂ ಆಗ ಸತ್ಯ ತಂಬುವುದು. ಆಗ ಮನುಷ್ಯ ಗುರುವಿನ ಬೆತ್ತದ ಬೆದರಿಕೆಯೊಳಪಟ್ಟು, ಅಥವಾ ನ್ಯಾಯಾಧೀಶ ವಿಧಿಸಬಹುದಾದ ಕಠಿಣ ಶಿಕ್ಷೆಗೆ ಅಂಜಿ ಸತ್ಯವನ್ನಾಡದೆ—ಮನುಷ್ಯನ ಶ್ರೇಯಸ್ಸಿಗೆ ಸತ್ಯ ಕಲ್ಯಾಣ ಪ್ರದವೆಂದೂ, ಸತ್ಯವನ್ನಾಡುವುದೇ ತನ್ನ ಸ್ವಭಾವವೆಂದೂ ತಿಳಿದು ನುಡಿಯುವನು. ಈ ಬಗೆಯ ಸತ್ಯ ಪ್ರೇಮವು ವಿದ್ಯಾರ್ಥಿಯನ್ನು ಎಲ್ಲ ಭಯಗಳಿಂದಲೂ ದೂರ ನಿರುವನು. ಕಷ್ಟ ಕಾರ್ಪಣ್ಯಗಳನ್ನು ಆದನು ಲೆಕ್ಕಿಸದೆ ಈ ಕ್ಷಣದಲ್ಲಿ ಉಚಿತವಾದುದನ್ನೇ ನುಡಿಯುವನು.

ನಮ್ಮ ಶಿಕ್ಷಣ ಹಾಗೂ ಶಿಕ್ಷಾ ಪದ್ಧತಿಯಲ್ಲಿರುವ ಮುಖ್ಯ ದೋಷವು ಭಯ ತೋರಿಸಿ ವರ್ತನೆಯನ್ನು ಸರಿಪಡಿಸುವ ಕ್ರಮ. ಇದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಮಕ್ಕಳು ಸತ್ಯ ನುಡಿಯಬೇಕೆಂದು ಅಂಜಿಕೆ ಹೊರಟರೆ, ಅವು ಭೀತಿಯಿಂದ ಸುಳ್ಳನ್ನಾಡುವುದೇ ನಿಜ. ಹಾಗೆಯೇ ಸತ್ಯ ನುಡಿದಾಗ ನಾವು ಅದನ್ನು ಕಡೆಗಣಿಸಿ ಕೋಪ ತೋರಿಸಿದರೆ—ಸುಳ್ಳಿನಿಂದಾದರೂ ನಮ್ಮ ಪ್ರೀತಿ ಗಳಿಸಲು ನೋಡಬಹುದು. ಒಂದು ಸಿಂಹ, ತೋಳ ಮತ್ತೊಂದು ನರಿ—ಒಟ್ಟಿಗೆ ಒಂದು ಕತ್ತೆ, ಜಿಂಕೆ, ಮತ್ತೊಂದು ಮೊಲವನ್ನು ಕೊಂದುವಂತೆ. ಆಗ ಸಿಂಹ ತೋಳದೊಡನೆ ಬೇಟೆಯನ್ನು ಹೇಗೆ ಹಂಚೋಣ ಎಂದು ಕೇಳಿತು. ತೋಳ—ಕತ್ತೆಯನ್ನು ಸಿಂಹವೂ, ತಾನು ಜಿಂಕೆಯನ್ನೂ, ನರಿ ಮೊಲವನ್ನೂ ತಿನ್ನೋಣ ಎಂದಿತು. ಇದರಿಂದ ಕುಪಿತನಾಗಿ ಸಿಂಹ ತೋಳವನ್ನು ಉಗುರಿನಿಂದ ಹೊಡೆದು ಕೊಂದಿತು. ಮತ್ತು ನರಿಯೊಡನೆ ಅದೇ ಪ್ರಶ್ನೆ ಕೇಳಿತು. ನರಿಯಂತೂ ಕತ್ತಾಕ್ಷಿ: 'ಸ್ವಾಮಿ, ಕತ್ತೆಯನ್ನು ಮಂಜಾನಿನ ಊಟಕ್ಕೂ, ಜಿಂಕೆಯನ್ನು ಸಂಜೆಯ ಭೋಜನಕ್ಕೂ ಉಪಯೋಗಿಸಿರಿ. ನಡುವೆ ಅಲ್ಪಾಹಾರವೆಂದು ಮೊಲವನ್ನು ಸ್ವೀಕರಿಸಿರಿ. ಇದೇ ಸರಿ' ಎಂದಿತು. ಸಿಂಹ ಸಂತುಷ್ಟಗೊಂಡು 'ನರಿರಾಯ, ಈ ರೀತಿ ನ್ಯಾಯ ಪ್ರಿಯತೆಯನ್ನೂ, ಬುದ್ಧಿವಂತಿಕೆಯನ್ನೂ ನಿನಗೆ ಕಲಿಸಿಕೊಟ್ಟವರಾರಯ್ಯಾ' ಎಂದು ಕೇಳಿತು. ಆದಕ್ಕೆ ನರಿ ಕೊಟ್ಟ ಉತ್ತರ—'ತೋಳ, ಸ್ವಾಮಿ!'

ನರಿ ಏಕಾಗಿ ಹೀಗೆಂದಿತು? ತನ್ನ ಸತ್ಯ ಭಾವನೆಯನ್ನು ವ್ಯಕ್ತಪಡಿಸಲು ಸಿಂಹದ ಹೆದರಿಕೆಯಿಂದ ಅವಕ್ಕೆ ಸಾಧ್ಯವಾಗಲಿಲ್ಲ. ಹಾಗೆಂದು ಸಿಂಹವನ್ನು ಪ್ರಸನ್ನಗೊಳಿಸಬೇಕೆಂಬ-ನೀಚವಾದ ಆಭಿಲಾಷೆಯೂ ಅದಕ್ಕಿತಲಿಲ್ಲ. ಇದ್ದುದೊಂದೇ, ಸಿಂಹದ್ದ ನಖದ ಭಯ! ಕೊನೆಗೆ ಸಿಂಹವಾದರೂ ನರಿಯನ್ನು ಹೊಗಳಿಬಹುದು ಶ್ರೇಷ್ಠೀಕರಣೆಯಿಂದಲ್ಲ, ಮೊಂಡವೆಲ್ಲ ತಥಗೇ ತಿನ್ನಲೆಂದೊರೆತ ಸ್ವಾರ್ಥದ ಜಯಘೋಷವೆಂದು. ಆದರೆ ಇದೆಲ್ಲ ಚಾಲಾಕಿತನವೇ ಹೊರತು, ಸತ್ಯ ಪ್ರಿಯರು ಎಂಬಿಗೂ ಇಂಥದನ್ನು ಮೆಚ್ಚುವುದಿಲ್ಲ. ಏನೇ ಆಗ್ಲಾದರೂ ಸರಿ, ಹೇಳಬಾರದೆನ್ನುವವರು—ಸ್ವಾರ್ಥ ಪಶದಿಂದ ನುಡಿದ ಅಸತ್ಯಪನ್ನು ಒಪ್ಪಲಿಕ್ಕೇ ಇಲ್ಲ. ಎಷ್ಟೋ ಮಂದಿ ಸತ್ಯ ನುಡಿದರೆ ಕಷ್ಟ ತಪ್ಪದು ಎನ್ನುವರು. ಆದರೆ ಸತ್ಯಕ್ಕೆ ಸತ್ಪಲ ದೊರೆತೇ ತೀರುವುದೆಂಬ ಅನುಭವಜನ್ಯ ವಾಕನ್ನು ಮರೆಯಬಾರದು. ಕಷ್ಟಪರಂಪರೆಗಳು ಮೊಹಲಿಗೆ ಬಂಡಾವು. ಆದರೆ ಕೊನೆಯ ವರೆಗೆ ಅಸತ್ಯದ ರಾಜ್ಯ ಭಾರ ನಡೆಯದು. ಸತ್ಯ ಹರಿಶ್ಚಂದ್ರನ ಕತೆಯನ್ನು ಕೇಳದವರಾರು?

ಕಷ್ಟಕ್ಕೆ ಒಳಗಾಗದೆ ಯಾವಾಗಲೂ ಸತ್ಯಕ್ಕೇ ಕಟ್ಟುಬಿದ್ದು ಜೀವಿಯಲು ಸುಲಭೋಪಾಯವೊಂದಿದೆ. ಗೋಪ್ಯವಾಗಿ ಇಡಬೇಕಾಗುವ ಯಾವುದೇ ಕೆಲಸವನ್ನು ನಾವು ಮಾಡದಿದ್ದರೆ ಸುಳ್ಳನ್ನಾಶ್ರಯಿಸುವ ಸಂದರ್ಭವೇ ಬರಲಾರದು. ಪ್ರತಿಕ್ಷಣವೂ ನಮ್ಮನ್ನು ದೇವರು ನೋಡುತ್ತಿರುವನೆಂಬ ಪವಿತ್ರಭಾವನೆ ನಮ್ಮಲ್ಲಿ ಇದ್ದರೆ—ಆಗ ಸತ್ಯವು ನಮ್ಮ ಸ್ವಭಾವವಾಗಿಯೇ ಪರಿಣಮಿಸುವುದು. ಅವಾಚ್ಯವಾದ ಶಬ್ದವನ್ನು ಉಚ್ಚರಿಸಲು ಒಡಂಬಡದವನು ಹೇಯ ಕಾರ್ಯಗಳನ್ನು ಕೈಗೊಳ್ಳಲಾರನು. ಸ್ವಮನೋವಾಕ್ಕಾಯಗಳಿಂದ ಮನುಷ್ಯನು ಸತ್ಯವನ್ನು ನೆಚ್ಚಿಕೊಂಡರೆ—ಬದುಕು ಹಸನಾಗುವುದು.

ಎಷ್ಟೋ ಮಂದಿ ಜನರು ನೋಡಲು ಸುಂದರರೂ ವಿನಯಶೀಲರೂ ಆಗಿ ಕಾಣುವರು. ಆದರೆ ಅವರ ಪ್ರತಿಯೊಂದು ಮಾತು ಅರ್ಥದಿಂದ ಕೂಡಿರುವುದಿಲ್ಲ. ಅವರು ಕೇವಲ ತೋರಿಕೆಗಾಗಿಯೇ ಒಳ್ಳೆಯ ಮಾತು ಹೇಳುವರು. ಮನಸ್ಸಿನಲ್ಲಿ ಬೇರೆಯೇ ಚಿಂತಿಸುವರು. ಅವರಲ್ಲಿರುವ ಈ ದೌರ್ಬಲ್ಯವನ್ನು ಕಣ್ಣು ಮುಂದಿಟ್ಟುಕೊಂಡು ಅಂಥವರ ಭರವಸೆಯನ್ನು ಮಾಡದಿರುವುದೇ ಒಳ್ಳೆದು. ಶ್ರೀಕೃಷ್ಣನ ಸಂಧಾನಕ್ಕಾಗಿ ಹಸ್ತಿನಾವತಿಗೆ ಬಂದಾಗ, ದುರ್ಯೋಧನನ ಸ್ವಾಗತವನ್ನು ಸ್ವೀಕರಿಸದೆ, ವಿದುರನ ಮನೆಗೆ ಭೋಜನಕ್ಕೆ ಹೋದನು. ಅಲ್ಲಿ ದೊರೆತದ್ದು ಒಂದು ಲೋಟ ಹಾಲೇ ಆದರೂ ಪಕ್ವಾನ್ನಗಳನ್ನುಂಡ ಸವಿಯಿಂದ ಸಂತುಷ್ಟನಾದನು ವಿದುರನು ಕೊಟ್ಟ ಹಾಲಿನಲ್ಲಿ ನಿಜವಾದ ಪ್ರೇಮಭಾವವಿತ್ತು. ಅದು ಆತ್ಮತೃಪ್ತಿಯನ್ನು ಕೊಟ್ಟಿತು. ದುರ್ಯೋಧನನು ಕೇವಲ ಆಡಂಬರ ಪ್ರದರ್ಶನಕಲು ಭಾರಿ ಔತಣವನ್ನೇರ್ಪಡಿಸಿದನು. ಹೊರತು, ಹೃದಯ ಕಲುಷಿತವಾಗಿತ್ತು, ಮನೋನ್ಮತ್ತವಾಗಿತ್ತು. ಇದೇ ಉದಾಹರಣೆ ರಾಮಾಯಣದಲ್ಲಿಯೂ ದೊರಕುವುದು. ಶಬರಿಯು ರಾಮನಿಗೆ ಎಂಜಲು ಮಾಡಿದ ಕಾಡು ಹಣ್ಣುಗಳನ್ನು ಕೊಟ್ಟಳು. ಅದರಲ್ಲಿದ್ದ ಸ್ವಾದ ಇನ್ನೆಲ್ಲಿಯೂ ಇರಲಿಲ್ಲ! ಮಹದ್ದ ಪೈಗಂಬರರ ಬಗ್ಗೆಯೂ ಒಂದು ಕಥೆ ಇದೆ ಓಮ್ಮೆ ಅವರಿಗೆ ಬಹಳ ಆಸ್ತಿ ಶಸ್ತ್ರಗಳೂ ಅಗತ್ಯ ಬೇಕಲು. ದೊಡ್ಡ ಪೆ

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:—THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೆದಾರರಿಗೆ ಸರಿಯಾದ ಬೋನಸ್ಸನ್ನು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ಕ್ಷಯರೋಗ ಹೇಗೆ ಸೋಂಕುತ್ತದೆ?

(ಲೇ:—ಡಾ. ವಿ. ಆರ್. ಭಟ್, ಎಂ. ಬಿ. ಬಿ. ಎಸ್., ಟಿ. ಡಿ. ಡಿ.)

ಕ್ಷಯರೋಗವೆಂದು ಕರೆಯಲ್ಪಡುವ ಮಹಾಭಯಂಕರ ಸಾಂಕ್ರಾಮಿಕ ರೋಗವು ಬಹಳ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಕ್ರಿ. ಪೂ ೧೦೦೦ ವರ್ಷ ಹಿಂದಿನ ಐಗುಪ್ತ 'ಮಮ್ಮಿ'ಗಳಲ್ಲಿ ಆ ರೋಗದ ಕುರುಹುಗಳು ಕಂಡುಬಂದಿವೆ. ಪ್ರಾಚೀನ ಭಾರತದ ವಿಶಿಷ್ಟ ವೈದ್ಯಕೀಯ ವಿಜ್ಞಾನವಾದ ಆಯುರ್ವೇದದಲ್ಲಿಯೂ ಹಲವು ಕಡೆ ಈ ರೋಗಕ್ಕೆ ಸಂಬಂಧಪಟ್ಟ ಉಲ್ಲೇಖಗಳು ಕಂಡುಬರುತ್ತವೆ; ಪ್ರಾಚೀನ ಭಾರತದಲ್ಲಿಯೂ ಈ ರೋಗವು ಹಬ್ಬಿಕೊಂಡಿತ್ತೆಂಬುದಕ್ಕೆ ಇದು ಪ್ರಬಲ ಸಾಕ್ಷ್ಯವಾಗಿದೆ. ಪ್ರಸ್ತುತ: ಅದು ಜಗತ್ತಿನ ಎಲ್ಲಾ ಭಾಗಗಳಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಅದು ವರ್ಷಕ್ಕೆ ಸುಮಾರು ೫ ಲಕ್ಷ ಮಂದಿಯನ್ನು ಬಲಿಕೊಂಡೊಯ್ಯುತ್ತಿದೆ ಎನ್ನಲಾಗಿದೆ. ಕ್ಷಯರೋಗದ ಪ್ರತಿಯೊಂದು ಮರಣ ಸಂಭವಿಸುವಾಗ, ಪ್ರತೀ ಮಂದಿಗೆ ಐದು ಮಂದಿಯಂತೆ ಇತರರು ಆ ರೋಗದಿಂದ ನರಳುತ್ತಿರುವರ; ಎಷ್ಟಾಗ ಸುಮಾರು ೫೦ ಲಕ್ಷ ಮಂದಿ ನಮ್ಮ ದೇಶದಲ್ಲಿ ಆ ರೋಗದಿಂದ ಬಳಲುವರೆಂದಾಯಿತು.

ಕೇವಲ ಮಾನವ ಜೀವಿಗಳಿಗೆ ಮಾತ್ರವಲ್ಲ, ಹಸು, ಕೋಳಿ ಇತ್ಯಾದಿ ಮೃಗಪಕ್ಷಿಗಳಿಗೂ ಅದು ಸೋಂಕಬಲ್ಲದು. ದೇಹದಲ್ಲಿಯ ಯಾವುದೇ ಅವಯವಕ್ಕೆ ಅದು ತಗಲಬಹುದು. ಉದಾ:—ಶ್ವಾಸಕೋಶಗಳು, ಗ್ರಂಥಿಗಳು, ಎಲುಬುಗಳು, ಸಂದುಗಳು, ಕರುಳು ಮೂತ್ರಪಿಂಡ, ಮೆದುಳಿನ ಪರೆ ಇತ್ಯಾದಿ. ಆದರೆ ಸಾಮಾನ್ಯವಾಗಿ ಅಧಿಕ ಕಡೆಗಳಲ್ಲಿ ಕಂಡುಬರುವುದು ಶ್ವಾಸಕೋಶಕ್ಕೆ ಸಂಬಂಧಪಟ್ಟುದು. ಅದು ದರಿಂದ ದೇಹದಲ್ಲಿ ಯಾವುದೇ ಅವಯವಕ್ಕೆ ಅದು ಹಿಡಿಯಬಹುದೆಂದು ತಿಳಿದವರು ವಿರಳ.

ಯಾವುದೇ ಪ್ರಾಯದಲ್ಲಿ ಕ್ಷಯವು ಹಿಡಿಯಬಹುದು. ಬಾಲ್ಯದ ಮೊದಲ ಮೂರು ವರ್ಷಗಳಲ್ಲಿ ಅದರ ಸೋಂಕು ಹಿಡಿಯುವ ಸಂಭವ ಅತ್ಯಧಿಕವಾಗಿದೆ ಅದು ಒಮ್ಮೆ ಸೋಂಕಿತೆಂದರೆ ದೇಹದ ಎಲ್ಲಾ ಅವಯವಗಳಿಗೆ ಹರಡಬಲ್ಲುದು. ಹೀಗಾಗಿ ಟ್ಯುಬರ್‌ಕ್ಯುಲಸ್ ಮೇನಂಜೈಟಿಸ್ ಎಂದು ಕರೆಯಲ್ಪಡುವ ಮೆದುಳ ಸಂಬಂಧವಾದ ಕ್ಷಯವು (ಮೆದುಳಿನ ಆವರಣಕ್ಕೆ ರೋಗದ ಸೋಂಕು ಹಿಡಿಯುವುದು)

ಸಾಮಾನ್ಯವಾಗಿ ೧೫ ರಿಂದ ೨೫ ತಿಂಗಳ ಪ್ರಾಯದ ಪುಟ್ಟಕ್ಕಳಲ್ಲಿ ಕಂಡುಬರುತ್ತದೆ. ೬ ರಿಂದ ೧೫ ವರ್ಷ ವರ್ಷಗಳ ವರೆಗೆ ಎಲುಬುಗಳು ಮತ್ತು ಸಂಧುಗಳ ಸಂಬಂಧವಾದ ಕ್ಷಯವು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಎಲುಬುಗಳಲ್ಲಿ ಹೆಚ್ಚಾಗಿ, ಬೆನ್ನೆಲುಬಿನ ಮಧ್ಯಭಾಗದ ಮತ್ತು ಕೆಳಗಿನ ಎಲುಬುಗಳನ್ನು ಅದು ಹಿಡಿಯುತ್ತದೆ; ಇನ್ನು ಸಂದುಗಳಲ್ಲಿ ಹೆಚ್ಚಾಗಿ ಸೊಂಟ, ಮೊಣಕಾಲು ಮತ್ತು ಹೆರಡು ಯಾನೆ ಮೊಣಗಂಟಿನಲ್ಲಿ ಅದು ಕಂಡುಬರುತ್ತದೆ.

ಕ್ಷಯವೆಂದು ಸಾಮಾನ್ಯವಾಗಿ ಕರೆಯಲ್ಪಡುವ ಶ್ವಾಸಕೋಶಕ್ಕೆ ಸಂಬಂಧಪಟ್ಟ ರೋಗವು ಹೆಚ್ಚಾಗಿ ೧೫ ವರ್ಷ ಪ್ರಾಯ ದಾಟಿದವರಲ್ಲಿ ಕಂಡುಬರುತ್ತದೆ. ಸ್ತ್ರೀಯರಲ್ಲಿ ಹೆಚ್ಚಾಗಿ ೧೫ ರಿಂದ ೪೦ ವರ್ಷದ ಅವಧಿಯಲ್ಲಿ (ಈ ಪ್ರಾಯದಲ್ಲಿ ಹೆಚ್ಚಾಗಿ ಬಾಣಂತಿತನವನ್ನು ಅವರು ಅನುಭವಿಸುತ್ತಾರೆ) ಮತ್ತು ಪುರುಷರಲ್ಲಿ ೨೫ ರಿಂದ ೬೦ ರ ಕಾಲದಲ್ಲಿ (ಸಾಂಸಾರಿಕ ತಾಪತ್ರಯಗಳ ಹೊರೆಯು ಅತ್ಯಧಿಕವಾಗುವ ಕಾಲ) ಅದು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಈ ರೋಗ ಹಿಡಿಯಲು ಇಂತಿಪ್ಪೇ ಪ್ರಾಯವೆಂಬ ನಿರ್ಣಯವಿಲ್ಲ. ಯಾವುದೇ ಪ್ರಾಯದಲ್ಲಿ ಅದು ಹಿಡಿಯಬಹುದು ೭೦ ಯೂ ೮೦ ವರ್ಷ ದಾಟಿದ ವಯೋವೃದ್ಧರಲ್ಲಿಯೂ ಅದು ಕಂಡುಬಂದಿದೆಯಂಟು. ಮುಂದಿನ ಪ್ರಾಯದಲ್ಲಿ ಅದು ಹಿಡಿಯುವುದಿಲ್ಲವೆಂಬ ನಂಬಿಕೆ ತಪ್ಪು.

ಇತರ ಯಾವುದೇ ಜಾಡ್ಯದೊಡನೆ ಕೂಡಿ ಕ್ಷಯವು ಕಂಡುಬರಬಹುದು. ಧಮ್ಮು ಯಾ ಪೈ ಗೂರಲು ರೋಗದೊಡನೆ ಅದು ಕೂಡುವುದಿಲ್ಲವೆಂಬ ಅಭಿಪ್ರಾಯ ಸರಿಯಲ್ಲ; ಹೆಲವು ಸಂದರ್ಭಗಳಲ್ಲಿ ಈ ಎರಡು ರೋಗಗಳು ಒಟ್ಟೊಟ್ಟಿಗೆ ಕಂಡುಬಂದುದಿದೆ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕ್ಷಯವು ಮಧುಮೇಹದೊಂದಿಗೆ ಕಂಡುಬರುವುದುಂಟು.

ಕ್ಷಯರೋಗವು ವಂಶಪಾರಂಪರ್ಯವಾದ ರೋಗವಲ್ಲ. ಕೆಲವೊಮ್ಮೆ ಒಂದು ಕಟುಂಬದಲ್ಲಿ ತಂದೆ ಯೂ ತಾಯಿಗೆ ಆ ರೋಗವಿದ್ದು ಅವರ ಮಕ್ಕಳಲ್ಲಿ ಕೆಲವರಲ್ಲಿ ಅದು ಕಂಡುಬಂದುದಿರಬಹುದು; ಇದರಿಂದ ಅದು ವಂಶಪಾರಂಪರ್ಯವಾದುದೆಂದು ಕೆಲವರು ತಿಳಿದುಕೊಳ್ಳುತ್ತಾರೆ. ಆದರೆ ನಿಜವಾದ ಸ್ಥಿತಿ ಹಾಗಿರುವುದಿಲ್ಲ. ಹೆತ್ತವರಿಂದ ರೋಗದ ಸೋಂಕು ಸಾಂಕ್ರಾಮಿಕವಾಗಿ ಮಕ್ಕಳಿಗೆ ಬರಬಹುದು. ಕುಟುಂಬದ ಸದಸ್ಯನಲ್ಲದ ಓರ್ವ ಆಡಿಗೆಯವನಿಗೆ ಕ್ಷಯರೋಗವಿದ್ದು, ಅವನ ಮೂಲಕವೂ ಕುಟುಂಬದ ಮಕ್ಕಳಿಗೆ ಅದು ತಗಲಬಹುದು. ಸರಿಯಾದ ಜಾಗ್ರತೆ ವಹಿಸಿದರೆ ಹೆತ್ತವರಿಂದ ಮಕ್ಕಳಿಗೆ ರೋಗದ ಸೋಂಕು ಬಾರದಂತೆ ತಡೆಯಬಹುದಾಗಿದೆ.

ಕ್ಷಯರೋಗವು ಸಾಂಕ್ರಾಮಿಕ ರೋಗ. ಆ ರೋಗವಿದ್ದವನಿಂದ ಮತ್ತೊಬ್ಬನಿಗೆ ಅದು ಪ್ರಸಾರವಾಗಬಹುದು. ಹೀಗೆ ಒಬ್ಬನಿಂದ ಮತ್ತೊಬ್ಬನಿಗೆ ರೋಗವು ಹರಡುವುದಕ್ಕೆ ಕ್ಷಯರೋಗಾಣುಗಳೇ ಮುಖ್ಯ ಕಾರಣ. ಬೇರೆ ಬೇರೆ ಪ್ರಾಣಿಗಳಲ್ಲಿ ಹಲವು ವಿಧದ ಕ್ಷಯಾಣುಗಳು ಕಂಡುಬರುತ್ತವೆ. ಆದರೆಅವುಗಳಲ್ಲಿ ಪ್ರಮುಖವಾದವುಗಳು ಮನುಷ್ಯನಲ್ಲಿ ಆ ರೋಗ ಬೆಳೆಸುವ ಹ್ಯೂಮನ್ ಜಾತಿಯವು ಮತ್ತು ಹಸುಗಳಲ್ಲಿ, ಹಸುವಿನ ಮೂಲಕ ಮನುಷ್ಯನಲ್ಲಿ ರೋಗ ಉಂಟುಮಾಡುವ ಬೊವೈಸ್ ಜಾತಿಯವು. ಭಾರತದಲ್ಲಿ ಮನುಷ್ಯರಲ್ಲಿ ಹೆಚ್ಚಾಗಿ ಹ್ಯೂಮನ್ ಜಾತಿಯ ಕ್ಷಯಾಣುಗಳ ಸೋಂಕೇ ಸಾಮಾನ್ಯವಾಗಿ ಕಂಡುಬರುತ್ತದೆ. ಸ್ಕೊಟ್ಲೆಂಡಿನಲ್ಲಿ ಹೆಲವರಿಗೆ ಬೊವೈನ್ ಆಣುಗಳ ಸೋಂಕು ಹಿಡಿಯುತ್ತದೆ. ಆ ರೋಗವ ಸೋಂಕು ಹಿಡಿದ ರೋಗಿಗಳ ಹೊರ ಸೂಸುವ ರೋಗಾಣು ವಿಶ್ರ ಕಶ್ಮಲದಲ್ಲಿ ಉದಾ: ಶ್ವಾಸಕೋಶ ಸಂಬಂಧವಾದ- ಕ್ಷಯರೋಗಿಯ ಉಗುಳುವ ಕಫದಲ್ಲಿ ರೋಗಾಣುಗಳು ವಿಜೃಂಭಿಸುತ್ತಿರುತ್ತವೆ. ಕ್ಷಯರೋಗಿಯು ಉಗುಳಿದ ಕಫದ ಕೆಲವು ಕಣಗಳನ್ನು ಒಂದು ಗಾಜಿನ ತುಂಡಿನ ಮೇಲೆ ಹರಡಿ ಬೇಕಾದ ಬಣ್ಣ ಹೆಚ್ಚಿಸಿ, ಸೂಕ್ಷ್ಮ ದರ್ಶಕಯಂತ್ರದ ಮೂಲಕ ನೋಡಿದರೆ ಅಧಿಕಾಧಿಕ ಸಂಖ್ಯೆಯ ರೋಗಾಣುಗಳು ಹೆರಡಿಕೊಂಡ ದೃಶ್ಯ ಕಂಡುಬರುವುದು. ಈ ದೃಶ್ಯದಲ್ಲಿ ರೋಗಾಣುಗಳು ಮೂಲ ರೂಪಕ್ಕಿಂತ ಸುಮಾರು ಸಾವಿರ ಪಾಲು ದೊಡ್ಡದಾಗಿ ಕಂಡುಬರುವವು.

ಕಫದ ಒಂದು ಅತಿ ಸೂಕ್ಷ್ಮ ಕಣದಲ್ಲಿ ಸಾವಿರಾರು ರೋಗಾಣುಗಳಿರಬಹುದು. ಒಣಗುವುದರಿಂದ ಈ ರೋಗಾಣುಗಳು ಫಕ್ಕನೆ ಸಾಯುವುದಿಲ್ಲ. ಓರ್ವ ಕ್ಷಯರೋಗಿಯು ರೋಗಾಣುಮಿಶ್ರಿತ ಕಫವನ್ನು ಉಗುಳಿದಾಗ, ದ್ರವರೂಪವಾಗಿದ್ದ ಅಂಶ ಆರಿಹೋಗಿ, ಉಳಿದಂಶ ಧೂಳಿನೊಂದಿಗೆ ಬೆರೆತು ಹೋಗಿ, ಅದರಲ್ಲಿರುವ ರೋಗಾಣುಗಳು ತೀರಾ ಸಹಜವಾಗಿ ಅವರ ಪಕ್ಕದಲ್ಲಿರುವವರ ದೇಹವನ್ನು ಅಧಿಕಾಂಶವಾಗಿ ಬೆಳೆಯಲು ಸಮರ್ಥವಾಗಿ ಉಳಿಯುತ್ತವೆ. ನೇರವಾದ ಸೂರ್ಯನ ಬಿಸಿಲು ಈ ರೋಗಾಣುಗಳನ್ನು ೬ ರಿಂದ ೮ ತಾಸುಗಳೊಳಗೆ ಕೊಲ್ಲಬಲ್ಲುದು. ಕತ್ತಲೆಯ ಜಾಗಗಳಲ್ಲಿ ಹಲವು ತಿಂಗಳಿಗಳ ತನಕ ಈ ರೋಗಾಣುಗಳು ಚೇತನಯುಕ್ತವಾಗಿ ಬದುಕಿಕೊಂಡಿರಬಲ್ಲವು. ಶೈತಕ ರೀತಿಯಲ್ಲಿ ಈ ರೋಗಾಣುಗಳನ್ನು ಬೆಳೆಸಬಹುದು. ಪರೀಕ್ಷಾ ಪ್ರಯೋಗಗಳಿಗಾಗಿ ಅವುಗಳನ್ನು ಹಾಗೆ ಬೆಳೆಸುತ್ತಾರೆ.

ಹೀಗೆ ಕ್ಷಯ ರೋಗವು ಕ್ಷಯರೋಗಾಣುಗಳಿಂದ ತಲೆದೋರುವುದೆಂದಾಯಿತು. ಈ ಕ್ಷಯರೋಗಾಣುಗಳು ಮನುಷ್ಯನ ದೇಹದೊಳಗೆ ಹೇಗೆ ಪ್ರವೇಶಿಸುತ್ತವೆ ಹಲವು ದ್ವಾರಗಳಿಂದ ಅವು ದೇಹವನ್ನು ಸೇರಬಲ್ಲುವು.

೧. ಉಸಿರಾಟದ ದಾರಿಯಾಗಿ— ಎಂದರೆ ಶ್ವಾಸಕೋಶಗಳ ಮೂಲಕ. ಕ್ಷಯರೋಗಾಣು ವಿಶ್ರಿತ ಕಫವು ಧೂಳಿನೊಂದಿಗೆ ಬೆರೆತು ಹೋದಾಗ ಅದರಲ್ಲಿರುವ ಕಣಗಳು ಗಾಳಿಗೆ ಮೇಲೆ ಹಾರಿ ಕ್ಷಯರೋಗಾಣುಗಳ ಧೂಳಿನೊಂದಿಗೆ ಶ್ವಾಸಕೋಶಗಳನ್ನು ಸೇರಬಹುದು.

ಹೆಚ್ಚಾಗಿ ಶ್ವಾಸಕೋಶ ಸಂಬಂಧವಾದ ಕ್ಷಯರೋಗಿಯೊಡನೆ ಸಂಪರ್ಕವಿರಿಸಿಕೊಳ್ಳುವುದರಿಂದ ಈ ರೋಗ ಬೇಗನೆ ಹರಡುತ್ತದೆ. ಈತಹ ರೋಗಿಯು ಕೆಮ್ಮುವಾಗ ಚಿಲ್ಲವೆ ಸೀನುವಾಗ ಅವನ ಮುಖದಿಂದ ಹೊರಡುವ ಉಚ್ಛ್ವಾಸದಲ್ಲಿ ಸಾವಿರಾರು ರೋಗಾಣುಗಳಿಂದ ಕೂಡಿದ ಕಫದ ಕಣಗಳು ಎರಡು ಮೂರು ಅಡಿಗಳಿಗಿಂತ ಹೆಚ್ಚು ದೂರಕ್ಕೆ ಹೊರ ಚಿಮ್ಮಲ್ಪಡಬಹುದು. ಆಗ ಅವನ ಸಮೀಪವಿದ್ದವರ 'ಇನ್‌ಹ್ಯಾಲೇಷನ್'ದಲ್ಲಿ ಚಿಕ್ಕ ಕಣಗಳು ಸೇರಬಹುದು. ರೋಗದ ಸೋಂಕು ತಗಲಿದವನೊಡನೆ ರಾತ್ರಿ ಕಾಲ ವ್ಯಸಲಗುವುದರಿಂದಲೂ ಅದು ಬೇರೊಬ್ಬರಿಗೆ ಸುಲಭವಾಗಿ ತಗಲಬಹುದು.

೨ ಜಠರ, ಕರುಳುಗಳ ಮೂಲಕ: ಎಂದರೆ ಉದರ ಮತ್ತು ಕರುಳಿನ ದಾರಿಯಾಗಿ ಆಹಾರ ಇಲ್ಲವೆ ಆಹಾರವಿರಿಸಿಡುವ ಪಾತ್ರೆಗಳಿಗೆ ಕ್ಷಯರೋಗಾಣು ವಿಶ್ರಿತ ಕಫದ ಕಣಗಳ ಸೋಂಕು ಹಲವು ಬೇರೆ ಬೇರೆ ರೀತಿಗಳಲ್ಲಿ ತಗಲುವ ಸಂಭವವಿದೆ. (a) ಕ್ಷಯರೋಗದ ಸೋಂಕು ಹಿಡಿದವನನ್ನು ಅಡಿಗೆಗೆ ನೇಮಿಸುವುದರಿಂದ (b) ಕ್ಷಯರೋಗಿಯೊಬ್ಬನ ಆಹಾರದ ಮೇಲೆ ಕೆಮ್ಮುವುದರಿಂದ (c) ಆಹಾರವನ್ನು ಮುಚ್ಚಿಡದೆ ನೊಣಗಳಿಗೆ ತೆರೆದಿಡುವುದರಿಂದ ರೋಗಾಣುವಿಶ್ರಿತ ಪದಾರ್ಥದ ಮೇಲೆ ಕುಳಿತ ನೊಣಗಳು ಆಹಾರದ ಮೇಲೆ ಕುಳಿತುವೆಂದರೆ ಅಲ್ಲಿಗೆ ಅದರ ಪ್ರಸಾರವಾಗುವುದು. (d) ಕ್ಷಯರೋಗಿಯು ಉಪಯೋಗಿಸಿದ ಪಾತ್ರೆ, ಚಮಚೆ ಇತ್ಯಾದಿಗಳಿಂದ ನೀರೋಗಿಗಳು ಬಳಸುವುದರಿಂದ. ರೋಗಿಗಳು ಉಪಯೋಗಿಸಿದ ಪಾತ್ರೆಗಳಲ್ಲಿ ಕೆಲವು ರೋಗಾಣುಗಳು ಅಂಟಿ

ಹ್ಮವರೆಲ್ಲ, ಬಹಳವಾಗಿ ಸಾವಿನ್ಯಾಗಳನ್ನೊದಗಿಸಿದರು. ಒಬ್ಬ ಬಡವನಿಗೂ ಪೈಗಂಬರರಿಗೆ ನೆರವಾಗುವ ಉತ್ಕಟೇಚ್ಛೆ ಇತ್ತು. ಆಪಳು ತನ್ನ ಸರ್ವಸ್ವವನ್ನು ಎಂದರೆ ಒಂದು ರೊಟ್ಟಿ ಮತ್ತು ಮೂರು ಖರ್ಜೂರಗಳನ್ನು ಅರ್ಪಿಸಿದಳು. ಸೇವಕರು ಇವನ್ನು ನೋಡಿ ನಕ್ಕು ಬಿಟ್ಟರು. ಪೈಗಂಬರರು ಆಗ ಹೀಗೆಂದರು—'ನಿನ್ನೆ ರಾತ್ರಿ ಇವಳಿಗೆ ಸ್ವಪ್ನವಾಯಿತು. ಈ ಹೆಂಗಸು ತನ್ನ ಬಳಿಯ ಅಲ್ಪ ವಸ್ತುಗಳನ್ನು ಒಂದು ತಟ್ಟೆಯಲ್ಲಿ ಮತ್ತು ಅಲಿಯ ಎಲ್ಲ ಮಹಾ ಬಳುವಳಿಗಳನ್ನು ಇನ್ನೊಂದರಲ್ಲಿ ಇಟ್ಟು, ದೇವದೂತರು ತಕ್ಕಡಿ ತೂಗಿದರು. ಇವಳ ತಟ್ಟೆಯೇ ಬಹಳ ಭಾರವಾಗಿತ್ತು!'

ಮನುಷ್ಯನ ಎಲ್ಲ ಆಶೋತ್ತರಗಳ ಅಂತಿಮ ಗುರಿಯೂಗಿ ಸತ್ಯವಿದೆ. ಪ್ರತಿಯೊಂದೂ ವಿಷಯದ ಜಿಜ್ಞಾಸು ಸತ್ಯಾನ್ವೇಷಿಯೂಗಿರುತ್ತಾನೆ. ಅಂಥಾ ವಿಶ್ವಾಸಗಳೂ, ಕಷ್ಟ ಕಾರ್ಪಣ್ಯಗಳೂ ನಮಗೆ ತೆಳ್ಗಂದರೆ ಕೊಡಬಹುದು. ಹಾಗೆಂದು ಸ್ಥಿರ ಬುದ್ಧಿಯಿಂದ, ಸ್ವಚ್ಛ ಹೃದಯದಿಂದ, ಸತ್ಯ ಪ್ರಿಯರಾಗಿ ವರ್ತಿಸಿದರೆ ಜಯ ಕಟ್ಟಿಟ್ಟಬ್ಬೇ. ಸತ್ಯಕ್ಕೇ ಜಯ ಎಂಬುವುದನ್ನು ನೆರೆಯಂತೆ ವರ್ತಿಸೋಣ. ಆಗ ಸತ್ಯ ಸಮಾಜ ಹಾಗೂ ರಾಜಕೀಯದಲ್ಲಿ ತುಂಬಿರುವ ಕಲ್ಮಶಗಳು ತನ್ನಿಂದ ತಾನೇ ದೂರಾಗುವುವು.

ಕೊಂಡಿರಬಹುದು. ಅದೇ ಪಾತ್ರೆಯನ್ನು ಬೇರೊಬ್ಬನು ಬಳಸುವಾಗ, ಆ ಪಾತ್ರೆಗಳು ಸರಿಯಾಗಿ ತೊಳೆಯಲ್ಪಡದಿದ್ದರೆ ರೋಗಾಣುಗಳ ಸೋಂಕು ಅವನಿಗೆ ತಟ್ಟುವ ಸಂಭವ ಅಕ್ಕಧಿಕ ಹೆಚ್ಚಾಗಿ ಹೊಟೆಲುಗಳಲ್ಲಿ ಇಂತಹ ಪ್ರಸಾರ ಬೇಗ ನಡೆಯುತ್ತದೆ. ಹೀಗೆ ರೋಗದ ಸೋಂಕು ಉಗುಳ ಮತ್ತು ಕಫಗಳನ್ನು ಸೇರಿ ವೈದ್ಯಕೀಯ ಪರಿಭಾಷೆಯಲ್ಲಿ ಮೂಲಕ ಅದು ರಕ್ತಪ್ರವಾಹದೊಂದಿಗೆ ಸೇರುತ್ತದೆ.

೩. ಶ್ಲೇಷ್ಮ ಪರಿ ಮತ್ತು ಚರ್ಮದ ಮೂಲಕ: ಶ್ಲೇಷ್ಮ ಪರಿಯ (ಮ್ಯೂಕಸ್ ಮೆಂಬ್ರೇನ್) ಮೂಲಕ (ಹೆಚ್ಚಾಗಿ ಶ್ಲೇಷ್ಮ ಪರಿಯು ರೋಗಯುಕ್ತವಾಗಿದ್ದರೆ) ರೋಗಾಣುಗಳು ದೇಹದೊಳಗೆ ಪ್ರವೇಶಿಸಬಹುದು. ಉದಾ: ಅಮೃತ ಗಂಟಲಿಗೆ (ಟಾನ್ಸಿಲ್) ಬೇರೆ ಯಾವುದೇ ರೋಗದ ಸೋಂಕು ಇದ್ದಾಗ ಅವುಗಳ ಶ್ಲೇಷ್ಮ ಪರೆಯ ದ್ವಾರವಾಗಿ ಆ ರೋಗಾಣುಗಳು ಬೇಗನೆ ದೇಹದೊಳಗೆ ಪ್ರವೇಶಿಸಬಹುದಾಗಿದೆ. ಗಾಯವಾದಾಗ ಇಲ್ಲವೇ ಒಡೆದಾಗ ಚರ್ಮದ ಮೂಲಕವೂ ರೋಗಾಣುಗಳು ದೇಹವನ್ನು ಸೇರಬಹುದು. ಇದು ಹೆಚ್ಚಾಗಿ ಕಸಾಯಿಗಳು ಇಲ್ಲವೆ ಪಶು ವೈದ್ಯರು ಕ್ಷಯದ ಸೋಂಕು ತಟ್ಟಿದ ಪ್ರಾಣಿಗಳನ್ನು ಕೊಯ್ಯುವಾಗ ಇಲ್ಲವೆ ಶಸ್ತ್ರ ಕ್ರಿಯೆ ನಡೆಸುವಾಗ ಸಂಭವಿಸುತ್ತದೆ.

—

ಓದುಗರ ಓಲೆಗಳು

ಪೈಸಾರಿ ಜಾಗ ಕೊಡುವಿಕೆ.

ಕೊಡಗಿನಲ್ಲಿ ಎಷ್ಟೋ ವರ್ಷದ ಹಿಂದಿನಿಂದಲೇ ಸರಕಾರದವರು ಭೂಮಿ ತೋಟ ಇಲ್ಲದ ಹಿಂದುಳಿದ ಪಂಗಡಗಳಿಗೆ ವಾಸಕ್ಕೆಂದು ಪೈಸಾರಿ ಜಾಗವನ್ನು ಕಂದಾಯ ವಸೂಲಿ ಇಲ್ಲದೆ ಮಂಜೂರು ಮಾಡಿ ಕೊಡುವುದು ಸರಿಯಷ್ಟೆ. ಆದರೆ ಇಂತಹ ಜಾಗವನ್ನು ದೀರ್ಘಕಾಲ ಇಟ್ಟುಕೊಂಡು ಅವರಿಗೆ ಒಂದಕ್ಕೆ ನಾಲ್ಕರಂತೆ ಮೂರಲು ಸರಕಾರವು ಅನುಮತಿಕೊಟ್ಟಿದೆಯೇ ಎಂದು ಗೊತ್ತಿಲ್ಲ. ಹಿಂದುಳಿದವರು ಎಷ್ಟೋ ಜನ ಕೂಲಿ ಗ್ರಾಮದಲ್ಲಿದ್ದು ಅಂತವರಿಗೆ ಕೊಡದೆ ಬೇರೆ ಮೂರಿದ್ದು ನೋಡುವಾಗ ಇಸು ತೋಡನೀಯ. ಇಂಥದ್ದನ್ನು ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ತಡೆಯುವರೇ.?

'ಹಿಂದುಳಿದವ'

—

ಇದು ಯಾವ ವಾದ?

ತಾ ೪-೮-೩೭ರಲ್ಲಿ ಕಾರ್ಗುಂದ ಗ್ರಾಮಸ್ಥರು ಬರೆದಿದ್ದ ಬಾಕ್ಸಿಯನ್ನು ಓದಿ ಬಹಳ ಸೋಜಿಗವೆನಿಸಿತು. ಇದು ಸಂಬಂಧಪಟ್ಟವರ ಪೇರಣೆಯಿಂದ ಬರೆದದ್ದೇ ವಿನಹ ನಿಜ ಸ್ಥಿತಿಯು ಇದಕ್ಕೆ ತೀರಾ ವಿರೋಧವಾಗಿರುತ್ತದೆ.

ಡಾಕ್ಟರವರ ರೋಗ ಪರೀಕ್ಷೆಯೂ, ಚಿಕಿತ್ಸಾ ಕ್ರಮವೂ ಮತ್ತೆ ಆಯುರ್ವೇದ ಔಷಧಗಳನ್ನು ಉಪಯೋಗಿಸುವ ಕ್ರಮವೂ ಏನೂ ತೃಪ್ತಿಕರವಲ್ಲವೆಂದರೆ ತಪ್ಪಾಗಲಾರದು. ತಾ. ೧೫-೮-೩೭ರ ಬಾಕ್ಸಿಯ ವಿಷಯ ಭಾಗಮಂಡಲದಲ್ಲಿ ನಡೆದದ್ದಾಗಿರುತ್ತದೆ. ಇದು ಬರೀ ಅಪವಾದವೆಂದು ಕಾರ್ಗುಂದವರು ಹೇಳುವುದು ಎಷ್ಟು ಸಮಂಜಸವಾಗಬಹುದು?

ಹಲವಾರು ಗ್ರಾಮಸ್ಥರುಗಳ ಆರ್ಜಿಗಳಿದ್ದರೂ ಡಾಕ್ಟರ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ಏನೊಂದೂ ಕಾರ್ಯಕ್ರಮ ಕೈಗೊಳ್ಳದಿರುವದು ಬಹಳ ವಿಷಾದಕರ ಬಡವರ ಆರೋಗ್ಯವನ್ನು ಯೋಗ್ಯರೀತಿಯಲ್ಲಿ ಪೋಷಿಸುವ ಕರ್ತವ್ಯ ಸರಕಾರದವರು ಕಾಯುವರೆ?

'ಕಾರುಗುಂದ ರೈತ'

—

ಕೈಮಗ್ಗ ಬಟ್ಟೆ.

ವಿದ್ಯಾಸು ಕೈಮಗ್ಗ ಸಹಕಾರ ಸಂಘದವರು ತಮ್ಮ ಒಂದು ಮೂರಾಟ ಶಾಖೆಯನ್ನು ಕೊಡಗು ಪ್ರಾಂತೀಯ ಸಹಕಾರ ಭ್ರಾತೃಕಿನ ಕಟ್ಟಡದಲ್ಲಿ ತೆರೆದಿರುವದು ಸಂತೋಷಕರ. ಕೈಮಗ್ಗದಲ್ಲಾ ತರಹದ ಒಟ್ಟೆಗಳು ಸುಲಭ ದರದಲ್ಲಿ ದೊರೆಯುತ್ತಿರುವುದು ಜನಹಿತವಾದದ್ದು ವಿದ್ಯಾಸಿನ ಪ್ರಧಾನಿ ಶ್ರೀ. ರಾಜಾಜಿಯವರು ಪ್ರಸರಿದಂತೆ ಕೈಮಗ್ಗ ಬಟ್ಟೆಯ ಉಪಯೋಗವು ಗುಡಿಕೈಗಾರಿಕೆಯ ಉನ್ನತಿಯ ಸಾಧನ ಮತ್ತು ಲಕ್ಷೋಪಲಕ್ಷ ಜನರ ಜೀವನಾಧಾರ. ಸರಕಾರ ಖಜೇರಿಗಳಲ್ಲಿ ಕೈಮಗ್ಗ ಬಟ್ಟೆಗಳನ್ನು ಉಪಯೋಗಿಸುವದು ಉತ್ತಮ. ಕೊಡಗಿನ ಮುಖ್ಯ ಸ್ಥಳಗಳಲ್ಲೆಲ್ಲಾ ಮೂರಾಟ ಶಾಖೆಗಳನ್ನು ತೆರೆದಲ್ಲು ಸಾರ್ವಜನಿಕರಿಗೂ ಹಾಗೂ ಸಂಘಕ್ಕೆ ಒಳ್ಳೆಯದು. ಸಹಕಾರ ಇಲಾಖೆಯವರು ಈ ವಿಚಾರವನ್ನು ಪರಿಶೀಲಿಸುವದು ಉತ್ತಮ.

'ನಾರಾಯಣ.'

—

ನಿಜ ಸಂಗತಿಗಳು.

ತಾ. ೨೭-೮-೩೭ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಬಾಕ್ಸಿಯಲ್ಲಿ-ಕಳೆದ ಎಸೆಂಬ್ಲಿಯ ವಿಟಿಂಗಿನಲ್ಲಿ ನಾನು ಪ್ರತ್ಯೇಕ ಪಕ್ಷದ ಮೆಂಬರುಗಳ ಪರ ಕಾಂಗ್ರೆಸು ಮಂತ್ರಿಮಂಡಳಕ್ಕೆ ಸಹಕಾರವನ್ನು ನೀಡಿದ್ದರೂ, ತಾ. ೧೫-೮-೩೭ರಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣದಲ್ಲಿ ಎಲ್ಲಿಯೂ ನಾನು ಭಾಗವಹಿಸಲಿಲ್ಲವೆಂತಲೂ, ಎಸೆಂಬ್ಲಿಯ ವಿಟಿಂಗಿನಲ್ಲಿ ನಾನು ಚೀಟಿ ಕಳಹಿಸುತ್ತಾ ನಮ್ಮ ಪಕ್ಷದ ಮೆಂಬರುಗಳು ಕಾಂಗ್ರೆಸು ಮಂತ್ರಿಮಂಡಳವನ್ನು ವಿರೋಧಿಸಲು ಪ್ರೋತ್ಸಾಹಿಸಿದೆನೆಂದೂ ಮುಂತಾದ ನಿಜವಲ್ಲದ ವಾರ್ತೆಗಳು ಇದ್ದವು. ಸದರಿ ಬಾಕ್ಸಿಯ ಉದ್ದೇಶನೇನಿದೆಯೆಂದು ಕೂಲಂಕಶವಾಗಿ ಉತ್ತರ ಕೊಡಲು ನನಗೆ ಇಚ್ಛೆಯಿಲ್ಲವಾದರೂ ನನಗೆ ಸಂಬಂಧಪಟ್ಟ ನಿಜವಲ್ಲದ ವಿಚಾರವನ್ನು ಅಲ್ಲಗಳೆಯುವಿ ಸಾಧ್ಯವಿಲ್ಲ.

ಭಾರತ ಭೂಮಿಗೆ ಸ್ವಾತಂತ್ರ್ಯವು ದೊರೆತ್ತಿಂದಿನಿಂದ ಇಡೀ ಹಿಂದೂಸ್ಥಾನದಲ್ಲಿ ಆಚರಿಸುತ್ತಿದ್ದಂತೆಯೇ ಸ್ವತಂತ್ರ ವರ್ಷ ಆಗೊಸ್ತು ತಾ. ೧೫ರಲ್ಲಿ ಧ್ವಜಾಭಿವಂದನೆಯನ್ನು ಮಾಡುತ್ತಾ ಬಂದಿರುವೆನು. ಅದೇ ರೀತಿ ಈ ವರ್ಷವೂ ತಾ ೧೫-೮-೩೭ರಲ್ಲಿ ಪ್ರಾತಃಕಾಲ ೬ ಗಂಟೆಗೆ ನನ್ನ ಮನೆಯ ಮೇಲೆ ಧ್ವಜಾರೋಹಣ ಮಾಡಿ, ನನ್ನ ಸಂಸಾರದೊಂದಿಗೆ ಧ್ವಜ ಭಿವಂದನೆಯನ್ನು ಮಾಡಿದೆನು. ಸರಕಾರದವರು ಕೋಟೆಯೊಳಗೆ ಬೆಳಿಗ್ಗೆ ೧೧ ಗಂಟೆಗೆ ನಡಿಸಿದ ಧ್ವಜಾಭಿವಂದನೆಯಲ್ಲಿ ಎಂದಿನಂತೆ ಭಾಗವಹಿಸಿದೆನು. ನನ್ನ ಮಕ್ಕಳೂ ಹೈಸ್ಕೂಲು ಮತ್ತು ಕಾಲೇಜಿನಲ್ಲಿ ಧ್ವಜಾಭಿವಂದನೆಯನ್ನು ಮುಗಿಸಿಕೊಂಡು, ಕೋಟೆಯೊಳಗಿನ ಕಾರ್ಯದಲ್ಲೂ ಭಾಗವಹಿಸಿದರು.

ಎಸೆಂಬ್ಲಿಯ ವಿಟಿಂಗಿನಲ್ಲಿ ಪ್ರತ್ಯೇಕ ಪಕ್ಷದ ಸೆಂಬರುಗಳಿಗೆ ನಾನು ಚೀಟಿ ಕಳುಹಿಸುತ್ತಿದ್ದದ್ದು ನಿಜ ಈ ರೀತಿ ಚೀಟಿಗಳನ್ನು ಕಾಂಗ್ರೆಸ್ಸು ಪಕ್ಷದವರೂ ಅತ್ತಿತ್ತ ತಮ್ಮ ಮೆಂಬರುಗಳಿಗೆ ಕಳುಹಿಸುತ್ತಿದ್ದರು. ಹೀಗೆ ಮಾಡುವುದು ವಾಡಿಕೆಯ ವಿಚಾರ. ಆದರೆ ನಾನು ಕಳುಹಿಸಿದ ಚೀಟಿಗಳು ಮಂತ್ರಿಮಂಡಲವನ್ನು ವಿರೋಧಿಸಲಿಕ್ಕಲ್ಲ. ಕಾಂಗ್ರೆಸು ಪಕ್ಷದ ಮೆಂಬರುಗಳು ಪ್ರತ್ಯೇಕ ಪಕ್ಷದವರನ್ನು ಕರೆಸಿ ಹೇಳುತ್ತಿದ್ದ ತಂತ್ರೀಕಾರದ ಮಾತುಗಳನ್ನು ಸಹಿಸಲಾರದೆ, ನಮ್ಮ ಪಕ್ಷದ ಹಲವರು ನಮ್ಮ ನಿಷೇಧವನ್ನು ಸೂಚಿಸಬೇಕೆಂದೂ, ನಾವು ವಿಟಿಂಗಿನಿಂದ ಎದ್ದು ಹೊರಗೆ ಹೋಗಬೇಕೆಂದೂ ಒತ್ತಾಯ ಪಡಿಸುತ್ತಿದಾಗ್ಯೆ, ಹಾಗೆ ಮಾಡದೆ ನಾವು ದೇಶದ ಮುಂದಿನ ಹಿತದೃಷ್ಟಿಯಿಂದ ಸಹನೆ ಮತ್ತು ತಾಳ್ಮೆಯನ್ನು ತೆಗೆದುಕೊಳ್ಳುವುದು ಉಚಿತವೆಂದು ನಾನು ಚೀಟಿ ಕಳುಹಿಸಿದ್ದಾಗಿದೆ. ನಿಜಸಂಗತಿಗಳು ಹೀಗಿವೆ.

ಪಿ ಐ. ಬೆಳ್ಯಪ್ಪ.

—

ಇದೆಂಥಾ ಆರೋಪಣೆ?

ಕಳೆದ ವಾರದ 'ಜನ್ಮಭೂಮಿ' ಪತ್ರಿಕೆಯಲ್ಲಿ 'ಇದು ಸಹಕಾರವೇ' ಎಂಬ ಬಾಕ್ಸಿಯನ್ನು ಓದಿ ನನಗೆ ಆಶ್ಚರ್ಯವುಂಟಾಯಿತು. ಪ್ರತ್ಯೇಕ ಪಕ್ಷದವರು ಸ್ವತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲಿಲ್ಲವೆಂಬುದೇ ಸದರಿ ಬಾಕ್ಸಿಯ ಆಪಾದನೆಯಾಗಿತ್ತು. ಈ ಆರೋಪಣೆಯಲ್ಲಿ ಒಂದಿಷ್ಟಾ ಸತ್ಯಾಂಶವಿಲ್ಲ. ಯಾಕಂದರೆ—ಮಡಿಕೇರಿ ಕೋಟೆಯೊಳಗೆ ಆ ದಿನ ಬೆಳಿಗ್ಗೆ ೧೧ ಗಂಟೆಗೆ ಧ್ವಜಾಭಿವಂದನೆ ನಡೆದಾಗ್ಗೆ ಅಲ್ಲಿ ಶ್ರೀ ಪಿ. ಐ ಬೆಳ್ಯಪ್ಪನವರ ಹಾಜರಿದ್ದದನ್ನು ನಾನು ಖುದ್ದು ನೋಡಿರುವೆನು. ಅಲ್ಲದೆ, ಮಡಿಕೇರಿ ಮೂರ್ಕಟನ ಬಳಿಯಲ್ಲೂ, ವೀರಾಜಪೇಟೆ, ಅವಟ್ಟಿ, ಸಿದ್ದಾಪುರವೇ ಮೊದಲಾದ ಕಡೆಗಳಲ್ಲೂ ನಡೆದ ಧ್ವಜಾರೋಹಣದ ಕಾರ್ಯಗಳಲ್ಲಿ ಪ್ರತ್ಯೇಕ ಪಕ್ಷದವರು ಭಾಗವಹಿಸಿರುವುದು ನನಗೆ ಗೊತ್ತಿದೆ. ಇತರ ಎಲ್ಲಾ ಕಡೆಗಳಲ್ಲೂ ಆ ಪಕ್ಷದವರು ಹಾಜರಿದ್ದರೆಂದೇ ನನ್ನ ತಿಳುವಳಿಕೆ. ಇದು ಹೊಸದಾಗಿ ಆಚರಿಸುವ ಸ್ವತಂತ್ರ ದಿನವಲ್ಲ ಇಂಡಿಯಾಕ್ಕೆ ಸ್ವಾತಂತ್ರ್ಯ ಸಿಕ್ಕಿ, ೧೫ಳಿಷವೇ ಇಸವಿಯಿಂದಲೂ ಆಗಸ್ಟ್ ೧೫ರಲ್ಲಿ ಈ ದಿನವು ಆಚರಿಸಲ್ಪಡುತ್ತಾ ಬರುತ್ತಿದೆ. ಇದರಲ್ಲಿ ಕಾಂಗ್ರೆಸ್ಸಿನವರೇ ಅಲ್ಲ, ದೇಶೀಯರೆಲ್ಲರೂ ಭಾಗವಹಿಸುತ್ತಾ ಬಂದಿರುತ್ತಾರೆ. ಇದು ಖಲಾತ್ಕಾರದ ಕಾರ್ಯವಲ್ಲ. ಸ್ವಯಂ ಪ್ರೇರಣೆಯಿಂದ ಮೂಡುವ ದೇಶಭಕ್ತಿಯ ಕಾರ್ಯ. ಹೀಗಿರುವಾಗ್ಗೆ ಈ ವರ್ಷ ಮಾತ್ರ ಪ್ರತ್ಯೇಕ ಪಕ್ಷದವರು ಎಂದಿನಂತೆ ಈ ಕಾರ್ಯದಲ್ಲಿ ಭಾಗವಹಿಸಿದ್ದರೂ ಭಾಗವಹಿಸಿಲ್ಲವೆಂದು ಅಪಪ್ರಚಾರ ಮಾಡುವದು ಎಂದೂ ಸರಿಯಲ್ಲ

ಕಿತಳೆ ಮೂರಾಟದ ಸಹಕಾರ ಸಂಘದ ಕವಿಟೆ ವಿಟಿಂಗೊಂದು ಆ ದಿನವೇ ಮಡಿಕೇರಿಯಲ್ಲಿ ಮಾಡಲ್ಪಟ್ಟಿತ್ತೆಂದು ಇನ್ನೊಂದು ಆರೋಪ. ಈ ವಿಟಿಂಗಾದರೊ, ೧೧ ಗಂಟೆಗೆ ಧ್ವಜಾರೋಹಣ ಮುಗಿದ ಮೇಲೆ, ೧೨ ಗಂಟೆಗೆ ನಡೆದದ್ದಾಗಿದೆ. ಅಲ್ಲದೆ ಈ ವಿಟಿಂಗನ್ನು ಮುಗಿಸಿಕೊಂಡು, ೩ ಗಂಟೆಗೆ ಕಾವೇರಿ ನಿಸರ್ಗಧಾಮದಲ್ಲಿ ನಡೆದ ಸಾರ್ವಜನಿಕ ಸಭೆಗೂ ಕೆಲವು ಕವಿಟೆ ಮೆಂಬರುಗಳು ಹೋಗಿರುವರು. ಅಲ್ಲದೆ ಈ ಕವಿಟೆ ವಿಟಿಂಗಿಗೆ ಬಂದ ಹೊರಗಿನ ಮೆಂಬರುಗಳಿಗೆ ಮಡಿಕೇರಿಯ ಸ್ವತಂತ್ರ ದಿನಾಚರಣೆಯಲ್ಲಿ ಭಾಗವಹಿಸಲು ಅನುಕೂಲವಾಗಿತ್ತು. ಆದಕಾರಣ ಈ ವಿಟಿಂಗಿನಿಂದ ಸ್ವತಂತ್ರ ದಿನಾಚರಣೆಗೆ ಯಾವದೊಂದೂ ಅಡಚಣೆ ಉಂಟಾಗಿರುವುದಿಲ್ಲ

ಮೂರ್ನಾಡು ಯೂನಿಯನ್ನಿನವರು ಆ ದಿನ ರಾಷ್ಟ್ರೀಯ ಧ್ವಜವನ್ನು ಕಾಂಗ್ರೆಸ್ ಎಡ್‌ಹಾಕ್ ಕವಿಟೆಗೆ ಕೊಡಲಿಲ್ಲವೆಂದು ಮತ್ತೊಂದು ಪುಕಾರು. ಯೂನಿಯನ್ನಿನ ಹಾಲ್ ಮತ್ತು ಬೆಂಚು, ಕುರ್ಚಿಗಳನ್ನು ಬಿಟ್ಟುಕೊಟ್ಟವರು ಧ್ವಜವನ್ನು ಕೊಡವರಲು ಕಾರಣವೇನಿರಬಹುದೆಂದು ವಿಚಾರಿಸಿದೆ. ಸದರಿ ಯೂನಿಯನ್ನಿನಲ್ಲಿ ಚಿಕ್ಕ ಸಿ ಧ್ವಜಗಳಿರುವಲ್ಲದೆ ದೊಡ್ಡ ಧ್ವಜವು ಅವರಲ್ಲಿಲ್ಲವೆಂಬ, ಈ ವಿಚಾರ ಧ್ವಜ ಕೇಳಿದವರಿಗೆ ಹೇಳಲಾಗಿದೆಯೆಂದೂ ತಿಳಿಯಬಂತು. ಇನ್ನು ಶ್ರೀ ಪಿ. ಐ. ಬೆಳ್ಯಪ್ಪನವರು ಎಸೆಂಬ್ಲಿಯಲ್ಲಿ ನೀಡಿದ ಸಹಕಾರ, ನಂತರ ಅವರ ವರ್ತನೆ ಮುಂತಾದ ವಿಷಯಗಳನ್ನು, ಕುರಿತು ಅವರೇ ಉತ್ತರವಿತ್ತರೆ, ಅಪಪ್ರಚಾರಕ್ಕೆ ಎಡೆ ಇಲ್ಲದಂತಾಗುವುದು, ಹೇಗೂ ದೇಶದ ಹಿತವನ್ನು ಬಯಸುವವರೆಲ್ಲರೂ ಸತ್ಯಾಂಶವನ್ನು ವಿಚಾರಿಸಿ ತಿಳಿದುಕೊಳ್ಳಲು ಪ್ರಯತ್ನಿಸುವರೆಂದು ಕೋರುತ್ತೇನೆ.

'ಸ್ವತಂತ್ರಪ್ರಿಯ.'

—

ನೇಪಾಳಿ ಗೂರ್ಖ ಜನರನ್ನು ಬ್ರಿಟಿಷ್ ಸೇನೆಗೆ ಭರ್ತಿ ಮಾಡಲು ಭಾರತದಲ್ಲಿ ಕೊಡಲಾಗಿದ್ದ ಸೌಕರ್ಯಗಳನ್ನು ನೆಲ್ಲಿಸಲಾಗುವುದೆಂದು ಭಾರತವು ನೇಪಾಳ, ಬ್ರಿಟನ್ನಾಗಳಿಗೆ ತಿಳಿಸಿದೆ.

—

ಕೊಡಗು

ತಾ. ೫-೯-೧೯೪೯ನೇ ಶುಕ್ರವಾರ

ಕಾಶ್ಮೀರದ ಸಮಸ್ಯೆ.

ಕಾಶ್ಮೀರ ಪ್ರಾಂತ್ಯವು ಹಿಂದೂಸ್ಥಾನಕ್ಕೆ ಸೇರಬೇಕೋ ಯಾ ಪಾಕಿಸ್ಥಾನದ ಭಾಗವಾಗಬೇಕೋ ಎಂಬ ಕಠಿಣ ಪ್ರಶ್ನೆಯನ್ನು ಬಗೆಹರಿಸಲು, ಭಾರತ ಭೂಮಿಗೆ ಸ್ವಾತಂತ್ರ್ಯ ದೊರೆತಂದಿನಿಂದಲೇ ಪ್ರಯತ್ನಗಳನ್ನು ನಡಿಸುತ್ತಾ ಬಂದಿದೆ. ಸಂಯುಕ್ತ ರಾಷ್ಟ್ರಾಂಗಗಳ ಕೂಟವು ಈ ಪ್ರಶ್ನೆಯನ್ನು ಬಿಡಿಸಲು ಧೀರ್ಘ ಕಾಲ ಸಾಧಿಸಿತು. ಆದರೂ ಮುಕ್ತಾಯಗೊಳ್ಳಲಿಲ್ಲ. ಈ ಮಧ್ಯೆ ಪಾಕಿಸ್ಥಾನದವರ ಪ್ರೋತ್ಸಾಹ ಮತ್ತು ಸಹಾಯದಿಂದ ಕಾಶ್ಮೀರದ ಗಡೀಯಲ್ಲಿರುವ ಕಾಶ್ಮಿನಿವಾಸಿಗಳು ಕಾಶ್ಮೀರದ ಮೇಲೆ ಧಾಳಿಯನ್ನು ನಡಿಸಿದರು. ಕಾಶ್ಮೀರದ ಜನರ ಕೋರಿಕೆಯಂತೆ ಹಿಂದೂ ದೇಶದ ಸರ್ಕಾರವು ಅವರ ಪ್ರಾಣರಕ್ಷಣೆಗಾಗಿ ತಮ್ಮ ಸೈನ್ಯವನ್ನು ಅಲ್ಲಿಗೆ ಕಳುಹಿಸಿ, ಧಾಳಿ ನಡಿಸಿದವರನ್ನು ಹಿಂದಕ್ಕೆ ಓಡಿಸಬೇಕಾಯಿತು; ಮೂತವಲ್ಲಿ ತಮ್ಮ ಸೈನ್ಯದ ಒಂದು ಭಾಗವನ್ನು ಅಲ್ಲಿಯೇ ಇಡಬೇಕಾಯಿತು- ಪಾಕಿಸ್ಥಾನದವರು ಜನಾಂಗಗಳ ಕೂಟದ ಮುಂದೆ ಈ ಧಾಳಿಗೆ ತಮ್ಮ ಕೈವಾಡವಿಲ್ಲವೆಂತು ಪ್ರಾರಂಭದಲ್ಲಿ ವಾದಿಸಿದರೂ, ಕಡೆಗೆ ತಾವು ಸಹಾಯ ನೀಡಿದ್ದನ್ನೂ, ತಮ್ಮ ಸೈನ್ಯವೂ ಕೂಡ ಭಾಗವಹಿಸಿದನ್ನೂ ಒಪ್ಪಿಕೊಳ್ಳಬೇಕಾಯಿತು. ನಂತರವೂ ಜನಾಂಗಗಳ ಕೂಟದ ಪ್ರತಿನಿಧಿಯು ಇಂಡಿಯಾಕ್ಕೆ ಬಂದು, ಇಂಡಿಯಾ ಮತ್ತು ಪಾಕಿಸ್ಥಾನವನ್ನು ಸರಿಸಮಾನತೆಯಲ್ಲಿ ಕಂಡು ರಾಜಿಯ ಪ್ರಯತ್ನಮಾಡಿದರು. ಯಾವದೊಂದೂ ಆತಂಕವಿಲ್ಲದ, ಸ್ವತಂತ್ರವಾದ 'ಪ್ಲೆಬಿಸೈಟ್' ಅಂದರೆ ಅಲ್ಲಿಯ ಜನತೆಯ ಅಭಿಪ್ರಾಯ ತೆಗೆಯುವ ಯೋಚನೆ ಮಾಡಲಾಯಿತು. ಹೀಗೆ ಅಭಿಪ್ರಾಯ ತೆಗೆಯಲು ಯೋಗ್ಯವಾದ ವಾತಾವರಣ ಕಲ್ಪಿಸಲಿಕ್ಕಾಗಿ ಅವಶ್ಯವಿರುವ ಏರ್ಪಾಡುಗಳ ವಿಚಾರದಲ್ಲಿ ಇಂಡಿಯ ಮತ್ತು ಪಾಕಿಸ್ಥಾನಗಳೊಳಗೆ ಒಪ್ಪಿಗೆ ಬರಲಿಲ್ಲಿ. ಸ. ಜ. ಕೂಟದ ಪ್ರತಿನಿಧಿಯು ಅಮೇರಿಕಾಕ್ಕೆ ಹಿಂತಿರುಗಿಹೋಗಿದ್ದವರು ಈಗ ಪುನಃ ಜಿನೇವಾದಲ್ಲಿ ಸೇರಿ ಇನೆರಡು ದೇಶಗಳ ಪ್ರತಿನಿತಿಗಳೊಂದಿಗೆ ಪರ್ಯಾಲೋಚನೆಮಾಡುತ್ತಿರುವರು. ಆದರೆ ಅಲ್ಲಿ ಚರ್ಚಿಸುತ್ತಿರುವ ಹೊಸ ಯೋಜನೆ ಏನೆಂಬುದು ಇನ್ನೂ ಹೊರಬಿದ್ದಿಲ್ಲ. ಗುಟ್ಟಿನಲ್ಲೇ ಇದೆ. ರಾಜಿಯ ಆಶೆ ಹೆಚ್ಚಾಗಿಲ್ಲ.

ಇಷ್ಟರಲ್ಲಿ ಅಮೇರಿಕದ ಒಂದು ಪತ್ರಿಕೆಯಲ್ಲಿ ಪಾಕಿಸ್ತಾನದ ಬರಹಗಾರರೊಬ್ಬರು- ಬರುವ ಚಳಿಗಾಲದಲ್ಲಿ ಗಡಿಪ್ರಾಂತ್ಯದ ಕಾಡುನಿವಾಸಿಗಳು ಪುನಹ ಒಮ್ಮೆ ಕಾಶ್ಮೀರದ ಮೇಲೆ ಧಾಳಿ ನಡಿಸುವ ಸಂಭವವಿದೆಯೆಂದು ಪ್ರಕಟಿಸಿರುವರು. ಹೀಗೆ ಧಾಳಿ ನಡೆಯುವದನ್ನು ತಡೆಯಲು ತಮಗೆ ಸಾಧ್ಯವಿಲ್ಲವೆಂದೂ ಪಾಕಿಸ್ತಾನದ ಸರ್ಕಾರವು ಬಹಿರಂಗಪಡಿಸುತ್ತಿರುವದಾದರೂ, ಅದು ಒಳಗಿಂದೊಳಗೆ ಇದಕ್ಕೆ ಬೇಕಾಹ ಸನ್ನಾಹಗಳನ್ನು ಮಾಡುತ್ತಿರಬಹುದೆಂದೂ, ಪಾಕಿಸ್ತಾನದ ವತಿಯಿಂದಿರುವ 'ಅಜಾದ್' ಕಾಶ್ಮೀರದಲ್ಲಿ ಈ ಕಾಡುನಿವಾಸಿಗಳ ಗುಂಪುಗಳ ತಿರುಗಾಟವು ಇತ್ತೀಚೆಗೆ ಹೆಚ್ಚಾಗಿದೆಯೆಂದೂ, ಹೀಗೆ ಪುನಃ ಧಾಳಿ ನಡೆದದ್ದೇ ಆದರೆ ಅದು ಕಡೆಗೆ ಇಂಡಿಯಾ ಮತ್ತು ಪಾಕಿಸ್ತಾನಗಳೊಳಗೆ ಯುದ್ಧ ಪ್ರಾರಂಭವಾದಂತೆಯೇ ಆಗುವದೆಂದೂ ಡೆಲ್ಲಿಯ ಅಧಿಕಾರಿಗಳು ಸೂಚಿಸಿರುವರು. ಈಜಿಪ್ಟದ ಜ್ಯೋತಿಷ್ಯರೊಬ್ಬರು ಇಂಡಿಯಾ-ಪಾಕಿಸ್ತಾನಗಳೊಳಗೆ ಯುದ್ಧ ನಡೆಯಬಹುದೆಂಬ ಭವಿಷ್ಯವನ್ನೂ ಹೇಳಿರುವರು.

ಆದರೆ ಕಾಶ್ಮೀರದ ಸರ್ಕಾರವು ಇಷ್ಟರೊಳಗೆ ಇಂಡಿಯಾ ಸರ್ಕಾರದೊಳಗೆ ತಾವೊಂದು ಪ್ರಾಂತ್ಯವಾಗಿರಲು ಒಪ್ಪಿರುವರು. ಹೇಗೂ ಈ ಚರಿತ್ರಾರ್ಹ ಭೂಮಿಯಲ್ಲಿ ಯಾವಾಗ ತೋಪುಗಳ ಭೋರ್ಗರೆಯುವುದೋ ಎಂಬ ಭೀತಿ ಇದೆ. ಆಧುನಿಕ ಯುದ್ಧದಿಂದಾಗಬಹುದಾದ ಭಯಂಕರ ಅನಾಹುತಗಳನ್ನು ಉಭಯ ಕಡೆಯವರೂ ಚೆನ್ನಾಗಿ ಸ್ಮರಿಸಿಕೊಂಡು ಬೇಗನೆ ರಾಜಿಯ ತೀರ್ಮಾನಕ್ಕೆ ಬರುವರೆಂದು ಆಶಿಸುತ್ತೇವೆ

ಧರ್ಮಾನ

ಕಳೆದ ತಾ. ೨೭ರಲ್ಲಿ ನಾಪೋಕ್ಲಿನವರು ಕೈಲ್‌ಪೊಳ್ದು ಸಂಬಂಧ ತೆಂಗಿನಕಾಯಿಗೆ ಗುರಿ ಹೊಡೆಯುವದು ಮತ್ತು ಆಟೋಟಗಳನ್ನು ನಡೆಸಿದರೆಂದೂ, ಗೆದ್ದವರಿಗೆ ಹೈಸ್ಕೂಲಿನ ಹೆಡ್‌ಮಾಸ್ಟರು ಇನಾಮುಗಳನ್ನು ಹಂಚಿದರೆಂದೂ ತಿಳಿಯಬರುತ್ತದೆ.

ಕಳೆದ ತಾ. ೨೯ರಿಂದ ಈ ತಾ. ೪ರ ವರೆಗೆ ಮಡಿಕೇರಿಯಲ್ಲಿ ೧ ಇಂಚು ೪೧ ಸೆಂಟು ಮಳೆಯಾಗಿದೆ. ಈ ವರ್ಷ ಜನವರಿಗಿಂದ ಆಗೊಸ್ತು ಅಂತ್ಯದ ವರೆಗೆ ೯೩ ಇಂಚು ೭೩ ಸೆಂಟು ಮಳೆಬಿದ್ದಿದೆ. ಕಳೆದ ವರ್ಷ ಇದೇ ಸಮಯದಲ್ಲಿ ೯೭ ಇಂಚು ೪೫ ಸೆಂಟು ಮಳೆಯಾಗಿತ್ತು.

ಕೊಡಗಿನ ಎಗ್ಸಿಕ್ಯುಟಿವ್ ಇಂಜಿನಿಯರಾಗಿದ್ದ ಶ್ರೀ ಉದಯಾಚಲಂರವರು ಅಲ್ಲಹಾಬಾದಿಗೆ ವರ್ಗಾಯಿಸಲ್ಪಟ್ಟು, ಶ್ರೀ ಎಸ್ ಹೆಚ್ ಅಭ್ಯಾಂಕರವರು ಡೆಲ್ಲಿಯಿಂದ ಈತಾ ೨ರಲ್ಲಿ ಬಂದು, ಇಲ್ಲಿಯ ಎಗ್ಸಿಕ್ಯುಟಿವ್ ಇಂಜಿನೀಯರ್ ಹುದ್ದೆಯ ಚಾರ್ಜನ್ನು ತಾ. ೫ರಲ್ಲಿ ವಹಿಸಿಕೊಳ್ಳುವರೆಂದು ತಿಳಿಯುತ್ತೇವೆ.

ಕಳೆದ ತಾ. ೧೫ರಲ್ಲಿ ವೆಲ್ಲಿಂಗ್ಡನಿನಲ್ಲಿ ನಡೆದ ಮಿಲಿಟರಿ ಸ್ಪೋರ್ಟ್ಸ್‌ನಲ್ಲಿ ಕ್ಯಾಪ್ಟನ್ ಕಾಳಪ್ಪನವರಿಗೂ, ಸಿ. ಸಿ. ಕುಂಞಪ್ಪನವರಿಗೂ ಮತ್ತು ಕೆ. ಬಿ. ತಿಮ್ಮಯ್ಯನವರಿಗೂ ಇನಾಮುಗಳು ದೊರೆತವೆಂದೂ, ಗೆದ್ದವರಿಗೆ ಇನಾಮುಗಳನ್ನು ಮೇಜರ್ ಬಿ. ಕೆ ಸೋಮಯ್ಯನವರ ಪತ್ನಿಯವರು ಹಂಚಿದರೆಂದೂ ತಿಳಿಯುತ್ತೇವೆ.

ಮುಂದೆ ನಡೆಯುವ ಟಿ. ಎಸ್. ಎಲ್. ಸಿ. ಪರೀಕ್ಷೆಗೆ ಹಣ ಕಟ್ಟುವವರು ಅಕ್ಟೋಬರ್ ೧ನೇ ತಾರೀಕಿನೊಳಗೆ ಕಳುಹಿಸಬೇಕೆಂದೂ ಅದರ ನಂತರ ಅಕ್ಟೋಬರ್ ೧೫ನೇ ತಾರೀಕಿನೊಳಗೆ ೧ ರೂ. ದಂಡ ತೆತ್ತು ಹಣ ಕಳುಹಿಸಬಹುದೆಂದೂ ಮದರಾಸು ಕವಿಷನರ್ ಆಫ್ ಗವರ್ನಮೆಂಟ್ ಎಗ್ಸಾಮಿನೇಷನ್ಸ್' ಇವರು ತಿಳಿಸುತ್ತಾರೆ

ಫ್ರೇಜರ್‌ಪೇಟೆ ಹೋಬಳಿ ತೊರೆನೂರು ಗ್ರಾಮದ ಶ್ರೀ ಟಿ ಆರ್. ಕೆಂಗಪ್ಪನವರಲ್ಲಿ ಒಂದು ಜೊತೆ ಗದ್ದೆ ಉಳುವ ಬಿಳಿವರ್ಣದ ಗಿಡ್ಡ ಎತ್ತುಗಳು ಸುಮಾರು ಒಂದೊವರೆ ತಿಂಗಳಿಂದ ಬಂದು ಸೇರಿಕೊಂಡಿವೆಯೆಂದೂ, ವಾರಿಸುದಾರರು ತಕ್ಕ ರುಜುವಾತಿನಿಂದ ಹೊಡಕೊಂಡು ಹೋಗಬಹುದೆಂದೂ ಅವರು ತಿಳಿಸಿರುವರು.

ಶ್ರೀಗಳಾದ ಎನ್. ಸಿ ಸುಬ್ಬಯ್ಯನವರು, ಕೆ. ಪಿ. ಕುಟ್ಟಪ್ಪನವರು ಪ್ರಾತ್ತು ಕೆ. ಬಿ ಪೊನ್ನಪ್ಪನವರುಗಳು ಕೆಲಸದಿಂದ ನಿವೃತ್ತರಾಗಿ ಹೋದ ಸಂದರ್ಭದಲ್ಲಿ ಪಬ್ಲಿಕಿನವರು ಕಳೆದ ಜುಲೈ ತಿಂಗಳಲ್ಲಿ ಕೊಟ್ಟ ಟೀ ಪಾರ್ಟಿಗೆ ಜಮೆಯಾದ ರೂ. ೨೯೬ರಲ್ಲಿ ರೂ. ೨೫೮-೨-೦ ಖರ್ಚಾಗಿ, ಉಳಿದ ರೂ. ೩೭-೧೪-೦ನ್ನು ಕೊಡಗಿನ ರೆಡ್‌ಕ್ರಾಸ್ ಸಂಘಕ್ಕೆ ಕೊಡಲಾಗಿದೆಯೆಂದು ಸ್ವಾಗತಾಧ್ಯಕ್ಷರಾದ ಶ್ರೀ ಪಿ. ಎ. ಚಂಗಪ್ಪನವರು ತಿಳಿಸಿರುತ್ತಾರೆ.

ಕೊಡಗಿನಲ್ಲಿ ಅವಲಕ್ಕಿ ಮತ್ತು ಪುರಿಯನ್ನು (೮೦) ಎಂಬತ್ತು ಸೇರಿನ ಪರಿಮಾಣದಲ್ಲಿ ತಯಾರಿಸಲು ಮತ್ತು ಮೂರಾಟಮಾಡಲು ಅನುಕೂಲವಾಗುವಂತೆ ಆಹಾರ ನಿಯಂತ್ರಣದ ನಿಬಂಧನೆಗಳನ್ನು ಈಗಾಗಲೇ ತಿದ್ದುಪಡಿ ಮಾಡಲಾಗಿದೆ ಕೆಲವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಅವಲಕ್ಕಿ ಮತ್ತು ಪುರಿಯನ್ನು ಕಾಳಸಂತೆಯಲ್ಲಿ ಹೆಚ್ಚು ಕ್ರಯಕ್ಕೆ ಮೂರಾಟಮಾಡುತ್ತಾರೆಂದು ತಿಳಿಯಬಂದಿದೆ. ಅವಲಕ್ಕಿ ಸೇರಿಗೆ ೦-೪-೯ ಪೈ ಮತ್ತು ಪುರಿ ಸೇರಿಗೆ ೦-೨-೩ ಪೈಯಂತೆ ಮೇಲೆ ಸೂಚಿಸಿದ ಪರಿಮಾಣದ ಅವಧಿಯಲ್ಲಿ ಮೂರಾಟ ಮಾಡಬಹುದೇ ವಿನಹ ಹೆಚ್ಚಿಗೆ ಕ್ರಯಕ್ಕೆ ಮೂರಾಟ ಮಾಡಕೂಡದು. ಹೆಚ್ಚಿನ ಕ್ರಯಕ್ಕೆ ಮೂರಾಟಮಾಡಿದವರು ತಕ್ಷೀರಿಗೆ ಗುರಿಯಾಗುತ್ತಾರೆಂದು ರೇಷನಿಂಗ್ ಡೈರೆಕ್ಟರವರು ಪ್ರಕಟಿಸಿರುತ್ತಾರೆ.

ಈ ತಾ ೫೦ ರಲ್ಲಿ ನಡೆಯಲಿರುವ ವೀರಾಜಪೇಟೆ ಮುನ್ಸಿಪಲ್ ಕಮಿಟಿ ಮೆಂಬರುಗಳ ಚುನಾವಣೆಗೆ ೧೫ ಸ್ಥಳಗಳಿಗೆ ೩೬ ಜನರು ಉಮೇದುವಾರರಾಗಿ ನಿಂತಿರವರು. ಕಾಂಗ್ರೆಸು ವತಿಯಿಂದ ಶ್ರೀಗಳಾದ ರಾಮಶೆಟ್ಟಿ, ಜಯಪ್ಪ, ಎಸ್. ಎಸ್. ರಾಮಮೂರ್ತಿ, ಜಯರಾಮಸಿಂಗ್, ಡಾ. ದೇಶಿಕಾಚಾರಿ, ಪಿ. ಯಂ. ಚಿಣ್ಣಪ್ಪ, ನಾರಾಯಣ ಕುರೂಪ್, ಲಾರೆನ್ಸ್ ಮೆನೆಜಸ್, ಎಂ. ಬಿ. ಅಯ್ಯಣ್ಣ, ಮಿಸಸ್ ಚೆಪ್ಪುಡಿರ ಕೆ. ಚಿಣ್ಣಪ್ಪ, ಡಿ. ಹೆಚ್. ಅಬ್ದುಲ್‌ರಹಮನ್, ಎಂ ಯುಸೂಫ್ ಸಾಹೇಬ್, ಅಂದ್ರು ಹಾಜಿ, ಟಿ. ಮಿಯಾ ಸಾಹೇಬ್ ಮತ್ತು ಅಬ್ದುಲ್ ಸತ್ತಾರ್ ಸಾಹೇಬರೂ, ಸ್ವತಂತ್ರಿಗಳಾಗಿ ಶ್ರೀಗಳಾದ ನೇಮಿರಾಜಯ್ಯ, ಮೋಹನ್‌ವೇಲು, ಶಿವನಂಜಪ್ಪ, ಭುಜಬಲ್ಲಯ್ಯ, ಬಿ. ಪಿ. ಬೋಪಯ್ಯ, ಹೆಚ್. ಬಿ. ತಮ್ಮಯ್ಯ, ಬಿ. ಯನ್. ಅಬ್ದುಲ್ ರಹಮನ್, ಮನ್ನ ಮೊರಾ, ಎ. ಪಿ ಸಾದಲಿ, ಡಾ॥ ಆಶ್ರಣ್ಣ, ಪುಲಿಯಂಡ ಕಾಯಪ್ಪ, ಪಿ. ಬಿ. ಭೀಮಯ್ಯ, ಎ. ಬಿ. ಗಣಪತಿ, ಕೆ. ಸಿ. ಕರುಂಬಯ್ಯ, ಕೆ. ಎ. ಚಿಣ್ಣಪ್ಪ, ಡಾ. ಯಂ. ಯೆಂ. ಚಂಗಪ್ಪ, ಚಿನ್ನಸಾಮಿ, ಎಂ. ಸಿ. ನಂಜಪ್ಪ, ಗೌಸ್‌ಖಾನ್, ಸಿ ಎಸ್ ನಂಜಪ್ಪ ಮತ್ತು ಮಿಸಸ್. ಡಾ॥ ಪಿ. ಬಿ. ಸೋಮಪ್ಪನವರುಗಳೂ ಉಮೇದುವಾರರುಗಳಾಗಿ ನಿಂತಿರುವರು.

ಕಳೆದ ಜನವರಿ ತಿಂಗಳು ೧೩ರಲ್ಲಿ ಗೋಣಿಕೊಪ್ಪಲ್ಲಲ್ಲಿ ನಡೆದ ಚುನಾವಣೆಯ ಪಬ್ಲಿಕ್ ಮೀಟಿಂಗಿನಲ್ಲಿ ಕ್ರಿ. ಪ್ರೊ. ಕೋಡಿನ ೧೫ನೇ ಸೆಕ್ಷನ್ ಪ್ರಕಾರ ದಂಗೆ ನಡೆಸಿದರೆಂಬ ಆಪಾದನೆಯ ಮೇರೆ ಶ್ರೀ ಕೆ. ಕೆ. ಅಪ್ಪಯ್ಯ ಮತ್ತು ೨೯ ಜನರು ಪ್ರತ್ಯೇಕ ಪಕ್ಷದ ಕೆಲಸಗಾರರ ಮೇಲೆ ಪೊಲೀಸಿನವರು ವೀರಾಜಪೇಟೆ ಮುನ್ಸೀಪ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಮೊಖದಮ್ಮೆ ಹೂಡಿ, ಕಳೆದ ತಾ. ೨೮ರಲ್ಲಿ ಪ್ರಥಮ ವಿಚಾರಣೆ ನಡೆಯಲಿಕ್ಕಿದ್ದದನ್ನು ಇಬ್ಬರು ಆಪರಾಧಿಗಳಿಗೆ ಸಮನ್ಸ್ ಜಾರಿಯಾಗಲಿಲ್ಲವೆಂದು, ಅಕ್ಟೋಬರ್ ತಾ. ೫ಕ್ಕೆ ಎಡ್ಜರ್‌ನ್ಮೆಂಟ್ ಮೂಡಲಾಗಿದೆಯೆಂದು ತಿಳಿಯಬರುತ್ತದೆ.

ತಿತಿಮತಿ ಹೊಸ ಶಾಲಾ ಕಟ್ಟಡ.

ತಿತಿಮತಿಯಲ್ಲಿ ತಮ್ಮ ಮೂತಾ ಪಿತೃಗಳ ಸ್ಮಾರಕವಾಗಿ ಶ್ರೀ ಮನೆಯಪಂಡ ಗಣಪತಿ ಮತ್ತು ಪತ್ನಿಯವರು ಸುಮಾರು ೨೦ ಸಾವಿರ ರೂ ಖರ್ಚಿನಿಂದ ಕಟ್ಟಿಸಿರುವ ಮನೆಯಂಡ ನಾಚಪ್ಪ-ನೀಲವ್ವ ಶಾಲಾ ಕಟ್ಟಡವನ್ನು ಕಳೆದ ತಾರೀಕು ೨೫ರಲ್ಲಿ ಇಂಡಿಯಾದ ಮುಖ್ಯ ಸೇನಾನಿಯಾದ ಜನರಲ್ ಕೆ. ಎಂ. ಕಾರ್ಯಪ್ಪನವರು ತೆರೆದರು. ಚೀಫ್ ಕವಿಷನರಾದ ಲೆ. ಕ. ಬೇಡಿಯವರು ಅಧ್ಯಕ್ಷರಾಗಿದ್ದರು. ಸಮಾರಂಭವು ಸಾಯಂಕಾ ನಾಲ್ಕುವರೆ ಗಂಟೆಗೆ ಪ್ರಾರಂಭವಾಯಿತು. ತುಂಬಾ ಜನರು ನೆರೆದಿದ್ದರು. ಶ್ರೀ ಎಂ. ಎನ್. ಗಣಪತಿಯವರು ಜ. ಕಾರ್ಯಪ್ಪನವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ನಂತರ ಸ್ವಾಗತ ಅಧ್ಯಕ್ಷರಾದ ಶ್ರೀ ಸಿ. ಎಸ್. ಪೂವಯ್ಯನವರು ಸ್ವಾಗತ ಭಾಷಣವನ್ನು ಮಾಡಿದರು. ಜ. ಕಾರ್ಯಪ್ಪನವರು ಉತ್ತರವೀಯುತ್ತಾ, ಗಣಪತಿಯವರ ಉದಾರ ಕಾರ್ಯವನ್ನು ಮೆಚ್ಚಿ, ಅಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳ ದೇಹ ಹಾಗೂ ಮನಸ್ಸಿನ ಆರೋಗ್ಯದ ಕಡೆಗೆ ತುಂಬಾ ಎಚ್ಚರವಿಡಬೇಕೆಂದು ಹೇಳಿ, ಕಟ್ಟಡವನ್ನು ತೆರೆದರು. ಮುಖ್ಯ ಮಂತ್ರಿಯಾದ ಶ್ರೀ ಸಿ. ಎಂ. ಪೂಣಚ್ಚನವರು ತಮ್ಮ ಚಿಕ್ಕ ಭಾಷಣದಿಂದ ಕಟ್ಟಡದಲ್ಲಿ ಶ್ರೀ ನಾಚಯ್ಯ-ನೀಲವ್ವನವರ ಭಾವಚಿತ್ರವನ್ನು ತೆರೆದರು. ಅಧ್ಯಕ್ಷರ ಮುಕ್ತಾಯದ ಭಾಷಣವಾದ ಮೇಲೆ ನೆರೆದಿದ್ದವರಿಗೆ ತಿಂಡಿತೀರ್ಥಗಳು ಹಂಚಲ್ಪಟ್ಟವು.

ಕೃತಜ್ಞತಾ ವಂದನೆ.

ತಾರೀಕು ೧೨-೮-೪೯ನೇ ಮಂಗಳವಾರ ದಿನ ಶಿವಾಧೀನರಾದ ನನ್ನ ತಂದೆ ಸುಬ್ರಾಯನವರ ವಿಯೋಗ ಕಾಲದಲ್ಲಿ ಪತ್ರಕ್ಷ ಬಂದೂ, ಸಂತಾಪ ಸೂಚನಾ ಪತ್ರ-ಬರೆದೂ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರನ್ನು ಪ್ರತ್ಯೇಕ ಬರೆದು ವಂದಿಸುವುದು ಅಸಾಧ್ಯವಾದ ಕಾರಣ ಆವರೆಲ್ಲರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಎಂ ಎಸ್ ಮಂದ್ಣಪ್ಪ,
ನೊಖ್ಯ ಗ್ರಾಮ,
ತಿತಿಮತಿ.

॥ ಕಮ್ಯುನಿಸ್ಟ್ ತತ್ವ ॥

ಲೇ:—ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ

'ಕಮ್ಯೂನಿಸ್ಟ್, ಕಮ್ಯೂನಿಜಮ್' ಅಥವಾ 'ಕಮ್ಯೂನಿಸ್ಟ್ ತತ್ವ' ಎಂಬ ಮಾತುಗಳು ಅನೇಕರ ಬಾಯಿಯಿಂದ ಆಗಾಗ್ಗೆ ಹೊರಡುವುದನ್ನೂ, ಈ ವಿಷಯದಲ್ಲಿ ಆಗಾಗ್ಗೆ ಚರ್ಚೆಗಳು ನಡೆಯುವುದನ್ನೂ ನಾವು ಎಲ್ಲೆಲ್ಲೂ ಕೇಳುತ್ತಿದ್ದೇವೆ. ಆದರೆ ಈ ತತ್ವದ ನಿಜವಾದ ವಿಜ್ಞಾನವನ್ನು ನಮ್ಮಲ್ಲಿ ಯಾರೂ ವಿಚಾರಿಸಿ ತಿಳಿದುಕೊಂಡಂತೆ ನನಗೆ ಈ ದಿನಗಳಿಗೆ ಮನವರಿಕೆಯಾಗಲಿಲ್ಲ. ಅಂತೂ ನಾನು ಈ ತತ್ವವನ್ನು ಪೂರ್ತಿ, ವಿಚಾರ ಕೇಳಿ ತಿಳಿದುಕೊಂಡವರ ಮಟ್ಟಿಗೆಗೆ ಹೇಳುವುದಾದರೆ, ಈ ತತ್ವಕ್ಕೆ ನಮ್ಮ ಈ ದೇಶದಲ್ಲಿ, ಎಂದರೆ ಕೊಡಗಿನಲ್ಲಿ ಎಷ್ಟೆಯೇ ಇಲ್ಲವೆಂದು ಹೇಳಬೇಕಾಗಿದೆ.

ಕಳೆದ ವರ್ಷದ ವರೆಗೆ ನಮ್ಮ ಪೇಟೆಯ ಒಬ್ಬ ಮಾರ ವ್ಯಾಪಾರಿಯು ಮಾರ ವ್ಯಾಪಾರದ ನೆಪದಲ್ಲಿ ಆಗಾಗ್ಗೆ ಬರುತ್ತಿದ್ದರು. ಅವರು ಬಂದಾಗಲೆಲ್ಲಾ ಸನ್ನೆಹಸೆ ಬಹಳ ಹೊತ್ತು ರಾಜಕೀಯ ವಿಷಯದಲ್ಲಿ ಚರ್ಚೆಯಾಗುತ್ತಿದ್ದರು. ಅವರು ಹಿಂದೂದೇಶದ ಕಾಂಗ್ರೆಸ್ ರಾಜ್ಯಭಾರವನ್ನು ಕುರಿತು ತಲೆಬೆಚ್ಚಿ ಬೀಳುವ ರೀತಿಯಲ್ಲಿ ಖಂಡಿಸಿ ಠಿಕಿಸುತ್ತಿದ್ದರು. ಆದರಿಂದ ನಾನೊಮ್ಮೆ ಅವರನ್ನು ಕುರಿತು 'ನೀವೇನು ಕಮ್ಯೂನಿಸ್ಟರೇ?' ಎಂದು ಪ್ರಶ್ನಿಸಿದಕ್ಕೆ ಅವರು 'ನಾವು ಕಮ್ಯೂನಿಸ್ಟರಲ್ಲ; ಆದರೆ ನಾನು ಅವರ ವಿಚಾರಗಳಿಗೆ ಅನುಗುಣವಾಗಿ ಹೋಗಿ ಧಾನ್ಯಗಳನ್ನು ತರುತ್ತಿದ್ದೇನೆ. ಅವರ ಕೆಲವು ಧ್ಯೇಯಗಳನ್ನು ನಾನೂ ಒಪ್ಪುತ್ತೇನೆ ಆದರೆ, ಅವರು ದೇವರನ್ನು ನಿರಾಕರಿಸುತ್ತಾರೆ. ನಾವು ದೇವರಲ್ಲಿ ತುಂಬಾ ಭಕ್ತಿಯುಳ್ಳವನಾಗಿದ್ದೇನೆ ಆದುದರಿಂದ ನಾವು ಕಮ್ಯೂನಿಸ್ಟ ಹೇಗೆ ಆಗುವುದು?' ಎಂಬುದಾಗಿ ನನಗೆ ಉತ್ತರಕೊಟ್ಟರು. ಆಷ್ಟಲ್ಲದೆ ಕೊಡಗಿನ ಒಬ್ಬಿಬ್ಬರು ಪ್ರಾಪು ಖ್ಯ ಕಮ್ಯೂನಿಸ್ಟ ಮುಂದಾಳುಗಳ ಹೆಸರನ್ನೂ ಹೇಳಿದರು.

ಇವರು ಹೇಳಿದ ಒಬ್ಬಿಬ್ಬರು ಕೊಡಗು ಕಮ್ಯೂನಿಸ್ಟರ ಪರಿಚಯವು ಮತ್ತು ಅವರ ರಾಜಕೀಯ ಧ್ಯೇಯೋದ್ದೇಶಗಳು ನನಗೆ ಸ್ವಲ್ಪ ಮಟ್ಟಿಗೆ ತಿಳಿದಿದೆ. ಆ ತಿಳುವಳಿಕೆಯಿಂದ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಈ ಮಹನೀಯರು ಕಮ್ಯೂನಿಸ್ಟರ ತತ್ವಗಳನ್ನು ಸರಿಯೂಗಿ ಮನನಮಾಡಿ, ಅದರಿಂದ ತೃಪ್ತರಾಗಿ, ಆ ತತ್ವವನ್ನು ಅನುಷ್ಠಾನಕ್ಕೆ ತರುವಂತಹ ಸಾಮರ್ಥ್ಯವಿಲ್ಲ. ಇದಕ್ಕೆ ಇವರ ಈ ಮೊದಲಿನ ನಡಾವಳಿಕೆಗಳೂ, ಇಂದು ಅವರು ಅವರ ದೈನಂದಿನ ವ್ಯವಹಾರಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳೇ ಸಾಕ್ಷಿ. ಅದು ಹೇಗೇ ಇರಲಿ ಕೊಡಗಿನಲ್ಲಿ ಈ ತತ್ವಕ್ಕೆ ಎಡೆ ಇಲ್ಲವೇ? ಎಂಬುದನ್ನು ಕೂಲಂಕುಶವಾಗಿ ಪರಿಶೀಲಿಸುವುದೇ ಈ ಬರವಣಿಗೆಯ ಮುಖ್ಯ ಗುರಿ.

ಕಮ್ಯೂನಿಜಂ ಎಂಬುದರ ಡಿಕ್ಷನರಿ ಅರ್ಥವು ಹೀಗಿದೆ. 'Vesting of property in the community, each member working according to his capacity and receiving according to his wants' ರಾಷ್ಟ್ರದ ಎಲ್ಲಾ ಆಸ್ತಿಪಾಸ್ತಿಗಳು ಸಮಾಜದ ಹಿತಕ್ಕಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯೂ ಅನಸ ಶಕ್ತ್ಯಾನುಸಾರ ಸಮಾಜಕ್ಕೆ ಕೆಲಸ ಮಾಡಿ, ಅವನ ಅವಶ್ಯಕತೆಗೆ ತಕ್ಕಂತೆ ಪ್ರಯೋಜನವನ್ನು ಹೊಂದುವುದು' ಎಂದು.

ಈ ತತ್ವವು ಸೋವಿಯೆಟ್ ರಷ್ಯದಲ್ಲಿ ಪ್ರಾರಂಭವಾಯಿತು. ಈಗ ಅವರು ಈ ತತ್ವವನ್ನು ಲೋಕದಲ್ಲೆಲ್ಲಾ ಹರಡುವ ಪ್ರಯತ್ನದಲ್ಲಿದ್ದಾರಂತೆ. ಈ ತತ್ವಗಳನ್ನು ಬೋಧಿಸತಕ್ಕ ಅನೇಕ ಪುಸ್ತಕಗಳು ಬಹು ಸುಲಭ ಬೆಲೆಗೆ ದೊರಲ್ಪಡುತ್ತಿವೆ. ಅಲ್ಲದೆ ಈ ತತ್ವವನ್ನು ಜನರಿಗೆ ಬೋಧಿಸಿ ಎಲ್ಲರೂ ಇದೇ ರೀತಿಯ ಸಮಾಜಗಳನ್ನು ಎಲ್ಲಾ ದೇಶಗಳಲ್ಲೂ ಹರಡಬೇಕೆಂಬ ಉದ್ದಿಶ್ಯದಿಂದ ಅನೇಕ ಜನರು ಈ ತತ್ವವನ್ನು ಬೋಧಿಸುವ ಕೆಲಸಗಳನ್ನು ಕೈಕೊಂಡಿರುವರೆಂದೂ, ಅವರಿಗೆ ಸಾಕಷ್ಟು ಪ್ರೋತ್ಸಾಹ ಮತ್ತು ಸಹಾಯ ರಷ್ಯದಿಂದ ಬರುತ್ತಿದೆ ಎಂದೂ ನಾನು ಕಳೆದ ಲೋಕ ಸಭೆಯಲ್ಲಿ ಅವ ಚರ್ಚೆಯಿಂದ ತಿಳಿದೆನು.

ಯಾವುದೇ ಒಂದು ತತ್ವವಾಗಲೀ ಯಾ ವಸ್ತುವಾಗಲೀ, ಎಲ್ಲಾ ಕಾಲಗಳಲ್ಲಿ, ಎಲ್ಲಾ ದೇಶಗಳಲ್ಲೂ ಮತ್ತು ಎಲ್ಲಾ ಸ್ಥಿತಿಗಳಲ್ಲೂ ಒಳ್ಳೆಯದೇ ಆಗಿರುತ್ತದೆಂದು ಖಂಡಿತವಾಗಿಯೂ ಹೇಳಲು ಸಾಧ್ಯವಿಲ್ಲ. ಎಂದರೆ ಕಾಲ, ದೇಶ, ಸ್ಥಿತಿಗತಿಗನುಸಾರವಾಗಿ ಒಬ್ಬನಿಗೆ ಅವಶ್ಯಕತೆಯಾಗಿರುವ ವಸ್ತು ಇನ್ನೊಬ್ಬನಿಗೆ ವಿಷವಾಗಿ ಪರಿಣಮಿಸುತ್ತದೆ ಎಂಬ ಮಾತು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಒಂದೆ ಡೆ ಪ್ಲೇಗಿನ ಜ್ವರ ಬಂದು ಜನರು ಸಾಯುತಿದ್ದರೆ, ಅದಕ್ಕೆ ಪ್ಲೇಗ್ ಇನಾಕ್ಯುಲೇಶನ್ ಮಾಡಿದರೆ ಅವರಿಗೆ ವಾಸಿಯಾಗುತ್ತದೆ. ಇವನ್ನು ನೋಡಿ ಇನ್ನೊಂದು ಕಡೆ ಟೈಫಾಯಿಡ್ ಕಾಯಿಲೆಯಿಂದ ನರಳುವವರನ್ನು ನೋಡಿ, ಅಲ್ಲಿ ಜ್ವರ ಬಂದವರಿಗೆ ಪ್ಲೇಗು ಡೋಸು ಹಾಕಿ ವಾಸಿಯಾಗಿದೆ; ಇವರಿಗೂ ಜ್ವರವಿದೆ. ಅದು ದರಿಂದ ಇವರಿಗೂ ಅದೇ ಔಷಧಿ ಕೊಟ್ಟರೆ ಅದೀತೆಂದು ಟೈಫಾಯಿಡ್ ಜ್ವರಕ್ಕೆ ಪ್ಲೇಗು ಇನಾಕ್ಯುಲೇಶನ್ ಕೊಟ್ಟರೆ ಅವರಿಗೆ ಗುಣವಾಗಲಾರದು. ಬದಲು ಅವರೆಲ್ಲಾ ಸತ್ತೇ ಹೋದಾರು. ಪ್ಲೇಗ್ ಜ್ವರವೇ ಆಗಲಿ ಯಾ ಟೈಫಾಯಿಡ್ ಜ್ವರವೇ ಆಗಲಿ ಅದರ ಹೆಸರಿನ ಚಿನ್ಹೆಯು ಬೈಬಿಸಿ ಎಂದ ಮಾತ್ರಕ್ಕೆ ಒಂದೊಂದು ಕಾಯಿಲೆಗೆ ಮಾಡಬೇಕಾದ ಚಿಕಿತ್ಸೆಯು ಅದರದರ ಕಾರಣವನ್ನು ಕಂಡುಹಿಡಿದು ಅವಕ್ಕೆ ತಕ್ಕದಾಗಿ ಮಾಡಬೇಕೇ ಹೊರತು ಹೊರಗಿನ ಚಿಹ್ನೆಯನ್ನು ನೋಡಿ ಅಲ್ಲಿ ಅವರು ಮಾಡಿದರು, ಆದುದರಿಂದ ಇಲ್ಲಿ ನಾವೂ ಏತಕ್ಕೆ ಮಾಡಬಾರದು ಎಂಬುದಾಗಿ ಒಂದು ತತ್ವ ಯಾ ಧ್ಯೇಯವನ್ನು ಕಾಲ, ದೇಶ, ಪರಿಸ್ಥಿತಿಗಳನ್ನು ಅಜಮೂಯಿಸದೆ ಮಾಡುವುದು ಎಂದೂ ಬುದ್ಧಿವಂತಿಕೆಯೂ ಅಲ್ಲ ಮತ್ತು ಅದರಿಂದ ದೇಶಕ್ಕೆ ಹಾನಿಯೆಲ್ಲದೆ ಎಂದೂ ಪ್ರಯೋಜನವಾಗಲಾರದು.

ಈ ದೃಷ್ಟಿಯಿಂದ ನಮ್ಮಲ್ಲಿ ಒಂದೊಂದು ಪಾರ್ಟಿ ಸಂಗಡಗಳನ್ನು ಸ್ಥಾಪಿಸಿ ನಮ್ಮ ಸರಕಾರದ ಧ್ಯೇಯ, ತತ್ವ ಮತ್ತು ಗುರಿಗಳನ್ನು ಬದಲಾಯಿಸಲು ಪ್ರಯತ್ನ ಪಡುವ ಮುಂದಾಳುಗಳು, ತಾವು ಪ್ರತಿಪಾದಿಸಲು ಹೊರಟಿರುವ ತತ್ವಗಳನ್ನು ನಾನಾ ದೃಷ್ಟಿಯಿಂದ ಪರಿಶೀಲಿಸಿ, ಚರ್ಚಿಸಿ, ಕ್ರಮವಾಗಿ ತುಲನೆ ಮಾಡಿ ಎಲ್ಲಾ ವಿಧದಲ್ಲೂ ಅದು ಜನಪದೂಪಯೋಗಿಯಾದ ಏಳಿಗೆಗೆ ನಿಜವಾಗಿಯೂ ಸಹಾಯಕವಾದ ದಾರಿ ಎಂಬುದಾಗಿ ವಿಚಾರಿಸಿದ ಮೇಲೆ ಮಾತ್ರ ಅಂತಹ ತತ್ವ ಯಾ ಧ್ಯೇಯವನ್ನು ದೇಶದಲ್ಲಿ ಹರಡಲು ಮತ್ತು ಬೇರೂರಿಸಲು ಪ್ರಯತ್ನ ಪಡಬೇಕು. ಯಾವುದೇ ಒಂದು ತತ್ವವೂ ಯಾವ ಕಾಲದಲ್ಲಿಯೂ ಒಂದೇ ರೀತಿಯಲ್ಲಿ ಎಲ್ಲಾ ಜನರಿಗೂ ಪ್ರಯೋಜನಕಾರಿಯಾಗಿ ಪರಿಣಮಿಸಲಾರದು. ಆದುದರಿಂದ ನಾವು ತುಲನೆ ಮಾಡಬೇಕಾದದ್ದು, ಹೆಚ್ಚಿನ ಜನರಿಗೆ ಹೆಚ್ಚಿನ ರೀತಿಯಲ್ಲಿ ಪ್ರಯೋಜನಕಾರಿಯಾಗುವ ಧ್ಯೇಯವು ಕೆಲವೆ ಜನರಿಗೆ ಸ್ವಲ್ಪ ಮಟ್ಟಿಗೇ ತೊಂದರೆ ಕೊಡುವಂತಿದ್ದರೂ ಅದನ್ನು ನಾವು ಊರ್ಜಿತಗೊಳಿಸಲೇಬೇಕು. ಅದು ಬಿಟ್ಟು 'ನನಗೆ ಹೇಗಾದರೂ ಒಬ್ಬನು ಮುಂದು ಆಗಬೇಕು. ಆ ನನ್ನ ಕಾರ್ಯಸಿದ್ಧಿಗೆ ಈ ವ್ಯವಹಾರ ಕ್ಷೇತ್ರದಲ್ಲಷ್ಟೇ ಅವಕಾಶವಿದೆ' ಅಥವಾ 'ನನಗೆ ಇಂತಿಷ್ಟವರ ಸೊಕ್ಕ ಮುರಿಯಬೇಕೆಂಬ ಆಶೆ ಇದೆ. ಆದಕ್ಕೆ ಈ ದಾರಿಯು ಸಂಪೂರ್ಣ ಸಹಕಾರಿಯಾಗಿದೆ. ಅಥವಾ ನಾನು ಕೊಂಡ ಬೆ ಕೊಡಿಲ್ಲದ ಬೋಳು ಮುರುವಾಗಿದ್ದೇನೆ. ಇತರರನ್ನೂ ನನ್ನ ಸ್ಥಿತಿಗೇ ತರಬೇಕು' ಎಂಬೀ ಮನಸ್ಸಿನಿಂದಾಗಲೀ ಅಥವಾ ಎಲ್ಲೋ ಒಬ್ಬರು ಈ ರೀತಿ ಮಾಡಿ ಅವರ ದೇಶವನ್ನು ಅತ್ಯುನ್ನತ ಸ್ಥಿತಿಗೆ ತಂದಿದ್ದಾರೆ ನಾವೂ ಸಹ ಹಾಗೆ ಮಾಡಿದರೆ ನಮ್ಮ ದೇಶವನ್ನೂ ಅದೇ ಸ್ಥಿತಿಗೆ ತರಬಹುದು' ಎಂದು ಯೋಚನೆಯಿಂದಾಗಲೀ, ಕೆಲವು ತತ್ವ ಮತ್ತು ಧ್ಯೇಯಗಳನ್ನು ತಿಳುವಳಿಕೆ ಇಲ್ಲದ ಜನರ ಮುಂದೆ ಹರಡಲು ಪ್ರಯತ್ನಿಸುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ನಾನು ಈ ಮೊದಲೇ ಬರೆದಂತೆ ಪ್ರಜಾಪ್ರತಿನಿಧಿ ಸರಕಾರ, ವ್ಯಕ್ತಿಸ್ವಾತಂತ್ರ್ಯ ಎಂಬಿವುಗಳು ಆದಿಯಿಂದಲೂ ರಾಜರಿಂದಲೇ ಆಳಿಸಿಕೊಂಡು ಬಂದ ನಮಗೆ ನಿಜವಾಗಿಯೂ ನವೀನ ಸಂಗತಿಗಳು. ಎಂದೂ ವ್ಯವಸಾಯ ಮಾಡದ ಜಮೀನಿನಲ್ಲಿ ಹೊಸದಾಗಿ ಕೃಷಿಮಾಡಿದಾಗ ಎಷ್ಟಾ ಬೆಳೆಯೂದರೂ ಸಮೃದ್ಧಿಯಾಗಿ, ಬೆಳೆಯುತ್ತದೆ. ಹಾಗೆಯೇ ನಮ್ಮ ದೇಶವೂ, ಜನಾಂಗವೂ ನಿಸ್ಕಲ್ಮಷವಾದ ಭೂಮಿಯಂತಿದೆ. ಇಲ್ಲಿ 'ತುಳಸಿ ನಟ್ಟರೂ ಬೆಳೆಯುತ್ತೆ, ತುರುಚೆ (ಆಂಗಿ) ನಟ್ಟರೂ ಬೆಳೆಯುತ್ತೆ' ಅಂತಿರುವಾಗ್ಗೆ ನಮ್ಮ ಮುಂದಾಳುಗಳು ದೇಶದ ಹೆಚ್ಚಿನ ಜನರ ಏಳಿಗೆಯನ್ನು ಮುಂದಿಟ್ಟು ತಮ್ಮ ಸ್ವಾರ್ಥದ ಆಶೆಗಳನ್ನು ಬದಿಗಿಟ್ಟು ದೇಶೋದ್ಧಾರವನ್ನು ಸರಿಯಾದ ದಾರಿಯಲ್ಲಿ ನಡೆಸುವ ಮಾರ್ಗವನ್ನು ಅವರಿಗೆ ತೋರಿಸಬೇಕಾದದ್ದು ಅವರ ಧರ್ಮವಾಗಿದೆ.

ಈ ದೃಷ್ಟಿಯಿಂದ ತುಲನೆಮಾಡಿದರೆ, ನಮ್ಮ ದೇಶವಲ್ಲಿ ಎಂದರೆ, ಇಡೀ ಭಾರತದಲ್ಲಿ ಕಮ್ಯೂನಿಸ್ಟ್ ತತ್ವಕ್ಕೆ ಎಡೆಯಿಲ್ಲ ಅದರಲ್ಲೂ ಕೊಡಗಿನಲ್ಲಿ ಮತ್ತಷ್ಟೂ ಇಲ್ಲ, ಎನ್ನಬೇಕಾಗಿದೆ. ಹಾಗೆ ಹೇಳಿದರೆ ಈ ತತ್ವವನ್ನು ಪ್ರತಿಪಾದಿಸುತ್ತಿರುವ ನಾವುಗಳು, ನನ್ನ ವಾದಕ್ಕೆ ಒಪ್ಪಲಾರರು. ಆದುದರಿಂದ, ನಾನು ಹೇಗೆ ಈ ಅಭಿಪ್ರಾಯಕ್ಕೆ ತಲಪಿರುತ್ತೇನೆಂಬುದನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುತ್ತೇನೆ.

ನಾನೇನು ರಷ್ಯಕ್ಕೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ಅಜಮೂಡಿಸಿ ಬಂದಿಲ್ಲ. ಹಾಗೆಯೇ ನಮ್ಮ ಈ ದೇಶದ ಕಮ್ಯೂನಿಸ್ಟ್ ಮುಂದಾಳುಗಳೂ ಹೋಗಿ ಪ್ರತಪಡಿಸಿ ಬಂದಿಲ್ಲವೆಂಬುದೇ ನನ್ನ ಭಾವನೆ ಒಬ್ಬರು ಹೇಳಿದಂತೆ 'ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಂಗಳಂ ಓದಿ, ಕೆಲವಂ ಮೂಲ್ಗವುಂದ ಕಂಡು, ಕೆಲವಂ ಸುಜ್ಞಾನದಿಂ ನೋಡುತ್ತ' ಎಂಬ ರೀತಿಯಿಂದ ನಾನು ಈ ಅಭಿಪ್ರಾಯಕ್ಕೆ ಬಂದಿದ್ದಾಗಿದೆ.

ರೋಗಿಗಳಿಗೆ ಸುಸಂದರ್ಭ! ಗುಣ ಹೊಂದಿರಿ!!

THE ASIATIC PHARMACY.

(AYURVEDIC DISPENSARY)

SCHOOL ROAD, MERCARA.

(Near Cauvery Mahal Theatre)

ಏಷ್ಯಾಟಿಕ್ ಫಾರ್ಮಸಿ.

(ಆಯುರ್ವೇದ ವೈದ್ಯಶಾಲಾ)

(ಸ್ಕೂಲ್ ರೋಡು, ಮಡಿಕೇರಿ)

(ಕಾವೇರಿ ಮಹಲ್ ಥಿಯೇಟರಿನ ಬಳಿ)

ಮೇಲಿನ ಹೆಸರಿನಿಂದ ತಾ॥ 28-8-1952 ರಿಂದ ತೆರೆಯಲಾಗಿರುವ 'ಆಯುರ್ವೇದ ವೈದ್ಯಶಾಲೆ'ಯಲ್ಲಿ ಎಲ್ಲಾ ರೀತಿಯ ಶಾಸ್ತ್ರೀಯ ಔಷಧಗಳು ದೊರೆಯುತ್ತವೆ. ವೈದ್ಯರು ಎಲ್ಲರನ್ನೂ ಪರೀಕ್ಷಿಸಿ, ಉತ್ತಮ ತರದ ಚಿಕಿತ್ಸೆಯನ್ನು ಪೂಡುತ್ತಾರೆ. ಮಹನೀಯರುಗಳು ನಮಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿ ವಿನಂತಿ.

4-1

ಕೆ. ಪಿ. ಬಾಲಕೃಷ್ಣನ್,

ಆಯುರ್ವೇದ ವೈದ್ಯರು

ರಷ್ಯದಲ್ಲಿ ಈ ಕಮ್ಯೂನಿಸ್ಟ್ ರಿವಲ್ಯೂಷನ್ ಕ್ರಾಂತಿಯುಂಟಾಗುವುದಕ್ಕೆ ಮುಖ್ಯ ರಷ್ಯದಲ್ಲಿದ್ದ ವಾತಾವರಣವು, ರಷ್ಯಾದಲ್ಲಿ ಕಮ್ಯೂನಿಸ್ಟ್ ಕ್ರಾಂತಿಯನ್ನು ಸ್ವಾಗತಿಸುವ ರೀತಿಯಲ್ಲಿತ್ತು. ಅಂದರೆ ಅಲ್ಲಿದ್ದದ್ದು ಎರಡೇ ಹಂಗಡ, ಬಂಡವಾಳಗಾರರು ಮತ್ತು ಕೂಲಿಕಾರರು ಅಥವಾ ಭೂಮಾಲಿಕರು ಮತ್ತು ಕೂಲಿಕಾರರು. ಈ ಎರಡು ಹಂಗಡಗಳನ್ನು ನಿರ್ಣಯಿಸುತ್ತಿದ್ದ ವಸ್ತುವೆಂದರೆ ಅವರ ಹುಟ್ಟು ಯಾ ಜನ್ಮ. ಬಂಡವಾಳಕಾರರ ಯಾ ಭೂಮಾಲೀಕರು ಮಕ್ಕಳು, ತಮ್ಮ ಜನ್ಮಹಕ್ಕಿನಿಂದ ಭೂಮಾಲೀಕರೇ ಏನಹ ಅವರು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯಲ್ಲ. ಭೂಮಾಲೀಕರು ಎಂದರೆ, ನಮ್ಮ ಈ ದೇಶದಲ್ಲಿರುವಂತೆ, ರೈತವಾರಿಗಳಲ್ಲ ದೊಡ್ಡ ದೊಡ್ಡ ಜಮೀನುದಾರರು. ಜಮೀನುದಾರ ಬಂಡವಾಳಕಾರರಲ್ಲದೆ, ಬೇರೆಯವರೆಲ್ಲಾ ಕೂಲಿಕಾರರೆ. ಕೂಲಿಕಾರರ ಮಕ್ಕಳಿಗೆ ವಿದ್ಯೆ ಕಲಿಯುವ ಅಥವಾ ಹೆಚ್ಚಾಗಿ ಧನ ಸಂಪಾದನೆ ಮಾಡುವ ಅಧಿಕಾರವಿಲ್ಲ. ಅವರಿಗೆ ಎಷ್ಟೇ ಬುದ್ಧಿ ಯಾ ಚಾತುರ್ಯವಿದ್ದಾಗ್ಯೂ, ಅವರು ಹುಟ್ಟಿನಿಂದ ಕೂಲಿಕಾರರಾದುದರಿಂದ ಅವರು ಕೂಲಿಕಾರರಾಗಿಯೇ ಸಾಯಬೇಕ.

ಹಾಗೆಯೇ ಹುಟ್ಟಿನಿಂದ ಭೂಮಾಲೀಕರೂ, ಬಂಡವಾಳಕಾರರೂ ಆದವರು ಎಂತಹ ದಡ್ಡನೇ ಇರಲೀ, ಯಾ ಹೇಡಿಯೇ ಇರಲಿ, ಅವರಿಗೆ ದೇಶದಲ್ಲಿ ಎಲ್ಲಾ ತರದ ಹಕ್ಕು ಮತ್ತು ದೊರೆತನ. ಅವರ ಜೀವನ ಕ್ರಮ ಎಂದರೆ ಜೂಜಾಡುವುದು, ಕುದುರೆ ರೇಸು, ಕುಡಿಯುವುದು ಮುಂತಾದ ಸುಖಸಂತೋಷಗಳಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರೇ ವಿನಹ ದೇಶದ ಬಹುತೇಕ ಜನಸಂಖ್ಯೆಯವರಾದ ಕೂಲಿಕಾರರ ಏಳಿಗೆಗೆ ಯಾವದೊಂದು ಸಾಕಾರ್ಯವನ್ನೂ ಕಲ್ಪಿಸುತ್ತಿರಲಿಲ್ಲ. ಅದರ ಬದಲು ಈ ಕೂಲಿಕಾರರಲ್ಲಿ ಅವಿದ್ಯೆ, ಅಜ್ಞಾನ ಮತ್ತು ಕಡುಬಡತನವನ್ನು ಹೆಚ್ಚಿಸಲಿಕ್ಕೆ ಎಲ್ಲಾ ಸಹಾಯವನ್ನು ಕಲ್ಪಿಸಿಕೊಟ್ಟಿದ್ದರು.

ಬಹು ಅಲ್ಪಸಂಖ್ಯೆಯ ಭೂಮಾಲೀಕರೂ ಬಂಡವಾಳಕಾರರೂ, ಬಹು ಹೆಚ್ಚು ಸಂಖ್ಯೆಯ ಕೂಲಿಕಾರರನ್ನು ಯಾವ ನಿಧದಲ್ಲೂ ಅವರು ಮುಂದುಬರದ ಹಾಗೆ ಮಾಡಿಟ್ಟಿದ್ದರು. ಈ ತರದ ಅವರ ನಡವಳಿಕೆಯಲ್ಲಿ, ಚರ್ಚಿನ ಪಾದ್ರಿಗಳು ಅವರಿಗೆ ಬಹಳ ಸಹಾಯಪಡಿಸಿದ್ದರು. ಈ ದೇಶದ ಹವಗುಣ ಮತ್ತು ಭೂಗೋಳಿಕ ಸ್ಥಿತಿಯು–ಹೊರಗಿನ ನಾಗರೀಕತೆಯು ಈ ದೇಶದೊಳಗೆ ಹೆಚ್ಚಾಗಿ ಪ್ರವೇಶಿಸಿ, ಆ ಜನರಲ್ಲಿ ಕ್ರಾಂತಿಯನ್ನು ಹುಟ್ಟಿಸುವ ಅನುವನ್ನು ಕಲ್ಪಿಸಲು ಅಡಚಣೆಗಳುಗಿದ್ದವು.

ಒಂದನೇ ಜಾಗತಿಕ ಯುದ್ಧದಲ್ಲಿ ಹೊರಗಿನ ಜನರು ರಷ್ಯದ ಜನರೊಡನೆ ಸಂಮಿಳಿತವಾಗುವ ಅನುವು ದೊರಕಿತು. ಈ ಸಂಪರ್ಕದ ಫಲವಾಗಿ ಅಲ್ಲಿನ ಕೂಲಿಕಾರರಿಗೆ ತಮ್ಮ ನಿಜವಾದ ಸ್ಥಿತಿಯು ತಿಳಿಯುವಂತಾಯಿತು. ಆ ಕೂಡಲೇ ಅವರು ತಮಗುಂಟಾಗುತ್ತಿದ್ದ ಅನ್ಯಾಯವನ್ನು ಕಂಡುಕೊಂಡರು. ಅವರ ಸಿಟ್ಟಿಗೂ, ರೋಷಕ್ಕೂ ತಡೆಯಿಲ್ಲದಂತಾಯಿತು. ಅಷ್ಟರ ವರೆಗೆ ಅಡಗಿಸಿಟ್ಟಿದ್ದ ಅವರ ಶಕ್ತಿ, ಸಿಟ್ಟು ಮತ್ತು ಶೌರ್ಯಗಳು ಕಟ್ಟೆಹೊಡೆದ ಪ್ರವಾಹದಂತೆ ಹೊರಟು ಯಾರು ಯಾರು ತಮ್ಮ ಸ್ವಾರ್ಥತೆಯ ದೃಷ್ಟಿಯಿಂದ ತಮ್ಮನ್ನು ಮುಂದುವರಿಯದಂತೆ ತಡೆದಿಟ್ಟಿದ್ದರೊ ಅವರನ್ನೆಲ್ಲಾ ಸಂಪೂರ್ಣ ನಾಶಮಾಡಿಬಿಟ್ಟವು ಇಷ್ಟೇ ಅಲ್ಲ, ಇಂತಹ ಅಮಾನುಷ ಕೃತ್ಯಕ್ಕೆ ಈ ವರೆಗೆ ಬೆಂಬಲಕೊಡುತ್ತಿದ್ದ ರಾಜಮನೆತನವನ್ನೂ, ಚರ್ಚಿನ ಪಾದರಿಗಳನ್ನೂ ಸಹ ನಿರ್ಮೂಲಮಾಡಿ ಈಗಿನ ಕಮ್ಯೂನಿಸ್ಟ್ ರಾಜ್ಯಭಾರ ಕ್ರಮವನ್ನು ಸ್ಥಾಪಿಸಿದರು.

ಮೊದಲಿದ್ದ ಎರಡು ವಿಭಾಗದಲ್ಲಿ ಭೂಮಾಲೀಕರ ಮತ್ತು ಬಂಡವಾಳಕಾರರ ಒಂದು ಭಾಗವು ಪರಿಪೂರ್ಣ ನಶಿಸಿಹೋದ ಮೇಲೆ ಅಲ್ಲಿ ಉಳಿದದ್ದು ಕೂಲಿಕಾರರ ಒಂದು ಸಮಾಜ ಮಾತ್ರ. ನಾಶಮಾಡಿಲ್ಪಟ್ಟವರ ಎಲ್ಲಾ ಆಸ್ತಿಯೂ, ಕಾರ್ಖಾನೆಗಳೂ, ಈ ಒಂದು ಕುಟುಂಬಕ್ಕೆ ಉಳಿದಂತಾಯಿತು. ಆದರಲ್ಲಿ ಒಬ್ಬರಿಗೊಬ್ಬರಿಗೆ ರಾಜಕೀಯ ಮತ್ತು ಆರ್ಥಿಕ ದೋರಣೆಗಳಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲವಾದ ಕಾರಣ ಅವರು ಎಲ್ಲಾ ಆಸ್ತಿಪಾಸ್ತಿಗಳನ್ನು ಹಂಚಿಕೊಳ್ಳುವುದರ ಬದಲು, ಒಟ್ಟಾಗಿ ಅನುಭೋಗಿಸಲು ನಿರ್ಧರಿಸಿದರು. ಅದರ ಫಲಿತಾಂಶವೇ ಸೋವಿಯಟ್ ಕಮ್ಯೂನಿಜಂ.

ಆದರೆ, ನಮ್ಮ ದೇಶದ ಸ್ಥಿತಿಯು ಹಾಗಲ್ಲ. ಇಲ್ಲ ಬಂಡವಾಳಶಾಯಿಗಳಿಗೂ, ಜಮೀನುದಾರರಿಗೂ ಮತ್ತು ಕಾರ್ಮಿಕರಿಗೂ ಮಧ್ಯೆ ಬಹಳ ಸಂಖ್ಯೆಯ ಮಧ್ಯ ಸ್ಥಿತಿಯ ಜನರು ಇದ್ದಾರೆ. ನಿಜವಾಗಿಯೂ ದೇಶದ ಆಡಳಿತವು, ಬಂಡವಾಳಶಾಯಿಗಳ ಅಥವ ಜಮೀನುದಾರ ಕೈಯಲ್ಲಿಲ್ಲ ಇದು ಈ ಮಧ್ಯಸ್ಥಿತಿಯ ಜನರ ಕೈಯಲ್ಲಿದೆ. ಈ ಮಧ್ಯಸ್ಥಿತಿಯ ಜನರು, ಮೇಲ್ತರಗತಿಯ ಬಂಡವಾಳಕಾರರನ್ನೂ ಮತ್ತು ಭೂಮಾಲೀಕರನ್ನೂ ಕಂಡಬಟ್ಟೆ ನಡೆಯಲು ಬಿಟ್ಟಲ್ಲ ಕೆಳಗಿನ ಮಟ್ಟದಲ್ಲಿರುವ ಮಜದೂರರಿಗೆ, ಇಲ್ಲಿ, ರಷ್ಯದಲ್ಲಿದ್ದ ಹಾಗೆ ಯಾವ ತರದ ಮುಂದುವರಿಯಲು ಅಸ್ಪದ ಕೊಡದ ನಿರ್ಧಾರದಗಳೂ ಇಲ್ಲ. ಅಷ್ಟೇ ಅಲ್ಲ, ಕೆಳಗಿನ ಮಟ್ಟದಲ್ಲಿರುವ ಮಜದೂರರಿಗೆ ಮನಸಿದರೆ, ಮುಂದಕ್ಕೆ ಬರಲು ಇಲ್ಲಿ ಯಾವ ತರದ ಅಡೆಚಣೆಯೂ ಇಲ್ಲ. ಅವರು ಆ ಸ್ಥಿತಿಯಲ್ಲಿರುವುದು ಅವರ ತಿಳಿಗೇಡಿತನದಿಂದಲ್ಲದೆ ಮೇಲ್ತರಗತಿಯವರು ಹಾಕಿದ ನಿರ್ಧಾರದಿಂದಲ್ಲ.

ಇಂಡಿಯದ ಕೆಲವು ಪ್ರಾಂತ್ಯಗಳಲ್ಲಿ ಜಮೀನುದಾರರು ಇದ್ದದರಿಂದ ಈ ಕಮ್ಯೂನಿಸ್ಟ್ ಮುಂದಾಳುಗಳಿಗೆ ಸ್ವಲ್ಪವಾದರೂ ಪೂರಾಡಲಿಕ್ಕೆ ಎಡೆ ಇದ್ದಿರಬಹುದು. ಅದನ್ನು ಸಹ ಸಂಪೂರ್ಣ ತಡೆಗಟ್ಟಲು ಕಾಂಗ್ರೆಸ್ ಸರಕಾರವು ಮುಂದೆ ಬಂದು ಜಮೀನುದಾರಿ ಪದ್ಧತಿಯನ್ನೇ ಹೋಗಲಾಡಿಸಲಿಕ್ಕೆ ಪ್ರಯತ್ನಮಾಡುತ್ತಿದೆ.

ನಮ್ಮ ಕೊಡಗಿನಲ್ಲಿ, ರಾಜರ ಕಾಲದಿಂದಲೇ ಅವರು ಈ ತರದ ಮೇಲ್ತರಗತಿಯ ಮತ್ತು ಕೆಳತರಗತಿಯ ಸಮೂಹಗಳು ತಲೆಹೋರದಂತೆ, ಅವನು ಅವನಿಂದಲೇ ಸ್ವಂತವಾಗಿ ರೂಢಿಗಲು ಸಾಕಷ್ಟಲ್ಲದೆ, ಬೇರೆಯವರನ್ನು ವಾರಗಾರರಾಗಿಟ್ಟುಕೊಂಡು ಭೂಮಿ ರೂಢಿಗುವ ಅನುವನ್ನು ಆಗಿನಿಂದಲೇ ಯೂರಿಗೂ, ಕಲ್ಪಿಸಿಕೊಡದೆ, ಜಮೀನುದಾರರು ಈ ದೇಶದಲ್ಲಿ ಹುಟ್ಟದ ಹಾಗೆಯೇ ಮಾಡಿದ್ದಾರೆ. ಇಲ್ಲಿರುವವರೆಲ್ಲಾ ರೈತಾಪಿಜನರು ಮತ್ತು ದಿನಸಂಬಳದಿಂದ ಜೀವನಮಾಡುವವರು. ದಿನಸಂಬಳದಿಂದ ಯಾ ತಿಂಗಳು ಸಂಬಳದಿಂದ ಜೀವನಮಾಡವವರಿಗೆ ಭೂಮಾಲೀಕರಾಗಕೂಡದೆಂಬ ನಿರ್ಬಂಧವು ಎಲ್ಲಿಯೂ ಇಲ್ಲ.

ಎರಡನೆಯದಾಗಿ ಇಲ್ಲಿಯ ಜನರ ಗುಣನಡತೆಗಳೂ ಸಹ ಕಮ್ಯೂನಿಸ್ಟ್ ಕ್ರಾಂತಿಕ್ಕೆ ವಿರೋಧವಾಗಿಯೇ ಇದೆ. ಒಂದೇ ತಂದೆ ತಾಯಿಯ ಮಕ್ಕಳೂ ಸಹ ಒಂದು ಕುಟುಂಬ, ಒಂದು ಅಡಿಗೆಯಲ್ಲಿರಲು ಇಚ್ಛಿಸದೆ ಪ್ರತ್ಯೇಕ್ಪ್ರಬುದ್ಧಕ್ಕೆ ಬಂದೊಡನೆ ಬೇರೆ ಬೇರೆಯಾಗಿ ಸಂಸಾರ ಮಾಡುವುದೇ ಕಂಡು ಬರುತ್ತದೆ. ಹೀಗೆ ಒಂದು ತಂದೆಯ ಮಕ್ಕಳೇ ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನೇ ಒಟ್ಟಾಗಿ ಅನುಭೋಗಿಸಲು ಇಷ್ಟ ಪಡದಿರುವಾಗ ನೂರಾರು ತಂದೆ ತಾಯಿಗಳ ವಕ್ಕಳಾಗಿ ನಾನಾ ತರದ ಜಾತಿ ಮತಕ್ಕೆ ಸೇರಿದವರು ಎಲ್ಲಾ ಆಸ್ತಿಪಾಸ್ತಿಗಳನ್ನು ರಾಷ್ಟ್ರಕ್ಕೆ ಒಪ್ಪಿಸಿ, ಕಾಮ್ರೇಡರ್ಷ್ಯದಲ್ಲಿರುವಂತೆ ಒಂದು ಕುಟುಂಬದವರಂತೆ ಜೀವಿಸುವ ಒಂದು ಸಮೂಹ ಜೀವನಕ್ಕೆ ಒಪ್ಪಿಯಾರು ಎಂಬದಾಗಿ ಭಾವಿಸುವುದು ಸ್ವಪ್ನವೇ ಸರಿ. ಒಂದು ಕುಟುಂಬದಲ್ಲಿದ್ದ ಆದರಿಂದ ಬರುವ ಸುಖವು ಕಡಮೆ ಎಂದು ಕಂಡದರಿಂದಲೇ ನಮ್ಮ ಅವಿಭಕ್ತ ಕುಟುಂಬಗಳೆಲ್ಲಾ ಚೂರು ಚೂರಾಗಿ ಒಡೆದದ್ದಾಗಿದೆ. ಹೀಗೆ ಅನುಭವದಿಂದ ಬಿಟ್ಟ ಒಂದು ಸಂಸ್ಥೆಯನ್ನು ಅದಕ್ಕಿಂತ ಬಲ ಅಸಾಧ್ಯವಾದ ಇನ್ನೊಂದು ರೀತಿಯಲ್ಲಿ ಪುನಃ ಸ್ಥಾಪಿಸಲು ಯಾರಾದರೂ ಪ್ರಯತ್ನ ಪಡುವುದೆಂದರೆ ಅದನ್ನು ಗಾಳಿಗೋಪುರವೆಂದೇ ಭಾವಿಸಬೇಕಾಗಿದೆ.

ಕಾಂಗ್ರೆಸ್ ಸರಕಾರದ ಅಧಿಕಾರವನ್ನು ಮುರಿಯಬೇಕಾದರೆ ನಾವು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಬೇಕೆಂದು ಕೆಲವು ಮುಂದಾಳುಗಳ ಅಭಿಪ್ರಾಯವಂತೆ. ಇದು ನಿಜವಾಗಿದ್ದರೆ ಅಂತಹ ಮುಂದಾಳುಗಳು ತಮ್ಮ ಜವಾಬ್ದಾರಿಕೆಯನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದೇ ಹೇಳಬೇಕು. ಕಾಂಗ್ರೆಸ್ ಮುಂದಾಳುಗಳ ಕೈಗೆ ಅಧಿಕಾರವನ್ನು ಕೊಟ್ಟವರು ಯಾರು? ದೇಶಸ್ಥರು. ಹಾಗಿರುವಾಗ ಕಾಂಗ್ರೆಸ್ ಅಧಿಕಾರಿಗಳು ದೇಶಸ್ಥರಿಗೆ ಅನ್ಯಾಯವಾಗುವ ರೀತಿಯಲ್ಲಿ ಅಧಿಕಾರ ಚಲಾಯಿಸಿದರೆ ಅವರನ್ನು ಗದ್ದಿಗೆಗೆ ಏರಿಸಿದವರಿಗೆ ಅವರನ್ನು ಕೆಳಗಿಳಿಸುವ ಶಕ್ತಿಯೂ ಇದೆ ಎಂಬುದನ್ನು ಅವರು ತಿಳಿದಿಲ್ಲವೇ? ಸಾಮಾನ್ಯ ಗತಿಯು ಹೀಗಿರುವಾಗ್ಯೆ ಅಂಥ ಸ್ವೇಚ್ಛಾಪ್ರವರ್ತಕರನ್ನು ಅಧಿಕಾರದಿಂದ ತೆಗೆದು ಹಾಕಿ, ಕಾಂಗ್ರೆಸ್ ಸಂಸ್ಥೆಯನ್ನು ಶುದ್ಧೀಕರಿಸುವುದಕ್ಕೆ ಪ್ರಯತ್ನಿಸುವುದರ ಬದಲು ಈ ಮುಂದಾಳುಗಳು ಕಮ್ಯೂನಿಸ್ಟ್ ಪಂಗಡವನ್ನು ಸ್ಥಾಪಿಸಲು ಪ್ರಯತ್ನ ಪಟ್ಟರೆ, ಅವರ ನಡವಳಿಕೆಯು "ಯಾರೋ ಹೇಳಿದಂತೆ' ಮುಖದ ಮೇಲೆ ಸಿಟ್ಟಿಗೆ ಮೂಗು ಕೊಯ್ದುಕೊಂಡಂತೆ' ಆದೀತು. ಅಷ್ಟೇ ಅಲ್ಲ, ಪೂರ್ವದಲ್ಲಿ ತನ್ನ ಅಳಿಯನಾದ ಪೃತ್ವೀರಾಜನ ಮೇಲಿನ ಸಿಟ್ಟಿನಿಂದ ಜಯಚಂದನು ಮಹಮ್ಮದ್ ಘೋರಿಯನ್ನು ದೆಹಲಿಗೇ ಕರೆತಂದಂತೆ ಆದೀತು. ಆದುದರಿಂದ ಯಾವನೊಬ್ಬ ಮುಂದಾಳು ದೇಶದ ಹಿತದೃಷ್ಟಿಯು ಅವನಲ್ಲಿದ್ದ ಪಕ್ಷದಲ್ಲಿ ಈ ತರದ ಬೇಜವಾಬ್ದಾರಿಕೆಲಸಕ್ಕೆ ಕೈಹಾಕಲಿಕ್ಕಿಲ್ಲವೆಂದು ಅಶಿಸಲಾಗಿದೆ.

— ನಿಮಗೆ ಅತ್ಯಂತ ಲಾಭದಾಯಕವಾಗಿ —
ವಿಮೆ ಮಾಡಲೂ ಅಥವಾ ಪ್ರತಿನಿಧಿಸಲೂ
ಇಂಡಿಯಾದ ಅತ್ಯಂತ ಹಳೆಯ ಮತ್ತು ಸುಭದ್ರತೆಯ ವಿಮಾ ಸಂಸ್ಥೆ.
ದಿ ಬಾಂಬೆ ಮ್ಯೂಚುವಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
[ಸ್ಥಾಪನೆ 1871]
ವಿವರಗಳಿಗೆ ಬರೆಯಿರಿ—ಬ್ರಾಂಚ್ ಸೆಕ್ರೆಟರಿ,
172-3 ನರಸಿಂಹರಾಜಾ ರಸ್ತೆ (P. B. 186),
12–1 ಬೆಂಗಳೂರು 2, ಅಥವಾ ಫೋನ್ ಮೂಡಿ–3624.

ಜಪಾನದಲ್ಲಿ ಹೆಣ್ಣು ಮಕ್ಕಳ ಮೂರಾಟ!

ಜಪಾನದಲ್ಲಿ ಬಡತನದ ಬೇಗೆಯಿಂದ ಬಳಲುತ್ತಿರುವ ಸಹಸ್ರಾರು ಒಕ್ಕಲಿಗರು ತಮ್ಮ ಹೆಣ್ಣು ಮಕ್ಕಳನ್ನು ಮೊರಿಕೊಳ್ಳುತ್ತಿದ್ದಾರೆ. ಹುಡುಗಿಯರ ಬೆಲೆ ೧೩ ರಿಂದ ೧೩೦ ರೂ. ಗಳ ವರೆಗೂ ಇರುತ್ತದೆ. ಕಳೆದ ವರ್ಷಕ್ಕಿಂತ ಈ ಸಲ ಹುಡುಗಿಯರ ಮೂರಾಟ ಪ್ರಮಾಣ ಇಮ್ಮಡಿಯಾಗಿದೆಯೆಂದು ಪೊಲೀಸರ ಹೇಳಿಕೆಯಿದೆ. ಮೂರಾಟವಾದ ಹುಡುಗಿಯರಲ್ಲಿ ೨೬೫೩ ಹುಡುಗಿಯರು ೧೯ ಕ್ಕಿಂತಲೂ ಕಡಮೆ ವಯಸ್ಸಿನವರಿದ್ದರು. ಪೊಲೀಸರು ೩೭೧೦ ಜನರನ್ನು ಬಂಧಿಸಿದ್ದಾರೆ. ಹುಡುಗಿಯರನ್ನು ಮೂರಾಟ ಮಾಡಿದ ಬೆಲೆಯಲ್ಲಿ ನೂರಕ್ಕೆ ೨೫ರಷ್ಟು ದಲಾಳಿಗಳಿಗೆ ಹೋಗುತ್ತಿದೆ. ಮೂರಾಟವಾದ ಹುಡುಗಿಯರನ್ನು ನಾನಾ ವಿಧವಾದ ಕೆಲಸಗಳಿಗೆ ಉಪಯೋಗಿಸುತ್ತಾರೆ. ವೇಶ್ಯಾಗೃಹಗಳು, ಕಾರ್ಖಾನೆಗಳು ಮುಂತಾದವುಗಳಿಂದಲೂ ಹೆಚ್ಚು

ಪ್ರಪಂಚದ ಶಾಂತಿ ಸ್ಥಾಪನೆ

'ಭಾರತವು ಪ್ರಗತಿ ಸಾಧಿಸಿ ಜಗತ್ತಿಗೆ ಯಾವುದಾದರೂ ಕಾಣಿಕೆ ಸಲ್ಲಿಸುವುದಾದರೆ ಇತರ ಜಪಾಂಗಗಳ ಬಗ್ಗೆ ಸರಿಯಾದ ತಿಳುವಳಿಕೆ ಮತ್ತು ಸಹಿಷ್ಣುಶಕ್ತಿಯನ್ನು ಬೆಳೆಸಿಕೊಳ್ಳುವುದರಿಂದ ಅದು ಸಾಧ್ಯವೇ ವಿನಾ ಅನ್ಯರ ಬಗ್ಗೆ ತಿರಸ್ಕಾರ ಅಥವಾ ಕಾಟಾಚಾರ ಭಾವನೆ ಇಟ್ಟುಕೊಳ್ಳುವುದರಿಂದಲ್ಲ' ಎಂದು ಭಾರತದ ಖಾಪ ರಾಷ್ಟ್ರಾಧ್ಯಕ್ಷರಾದ ಡಾ. ಎಸ್. ರಾಧಾಕೃಷ್ಣನ್‌ರವರು ಪುಣೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಅಲ್ಲಿಯ ದ. ಭಾರತ ಸಂಘದ ಆಶ್ರಯದಲ್ಲಿ ಡಾ. ೩ಜರಲ್ಲಿ ನಡೆದ ಭಾರಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ, ಕಮ್ಯುನಿಜಂ ಮತ್ತು ಪ್ರಜಾತಂತ್ರ ಸಭೆಗಳಲ್ಲಿಯೂ ಭಾರಿ ಕಂದುಕೊರತೆಗಳಿವೆಯೆಂದು ಅವರು ತಿಳಿಸಿದರು. ಆದರೆ ಮಾನವ ಜಪಾಂಗದ ಜೊಡ್ಡ ಭಾಗದ ಮೇಲೆ ಪ್ರಭಾವ ಬೀರಿರುವ ಚಳುವಳಿಯು ತನ್ನದೇ ಪ್ರಾಶಸ್ತ್ಯ ಪಡೆದಿದೆಯೆಂದೂ, ಅದನ್ನು ತಿರಸ್ಕರಿಸುವುದು ಸಾಧ್ಯವಿಲ್ಲವೆಂದೂ ಡಾ. ರಾಧಾಕೃಷ್ಣನ್ ಅವರು ಹೇಳಿದರು. ವಿಶ್ವಶಾಂತಿಯನ್ನು ನೆಲೆಗೊಳಿಸಲು ಈ ಉಭಯ ಪಡ್ಡತಿಗಳ ನಡುವೆ ಹರಪ್ಪರ ಹೊಂದಾಣಿಕೆ ಅಗತ್ಯವೆಂದು ಅವರು ಸೂಚಿಸಿದರು.

ದೇಶದ ಯುವಕರ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿ ದೇಶದ ಪುನರುದ್ಧಾರ ಕಾರ್ಯದಲ್ಲಿ ಭಾರತದ ಯುವಕ ಯುವತಿಯರು ಮಹತ್ವ ಪಾತ್ರ ವಹಿಸಬೇಕಾಗಿದೆಯೆಂದು ಕರೆ ನೀಡಿದರು.

'ಮಾನವಿಕತೆ ಬದಲಾವಣೆಯನ್ನು ಬೇಡಿಕೊಳ್ಳುತ್ತಿದೆ. ಆದರೆ ಯುವಕರೇ ಭಾರತದ ಭವಿಷ್ಯದ ಆಶಾಕಿರಣಗಳು. ವೇದಗಳೇ ಮೊದಲಾದ ಪ್ರಾಚೀನ ಭಾರತದ ಉದ್ಗ್ರಂಥಗಳು ಮಾನವ ಜಪಾಂಗದಲ್ಲೇ ಪ್ರತ್ಯೇಕತೆಯ ಭಾವನೆಯನ್ನು ಹೆಳೆಯಿಸುತ್ತವೆ. ಭಾರತದ ಜನರು ಈ ತತ್ವಗಳನ್ನು ಮನನ ಮಾಡಿಕೊಂಡು ಮಾನವ ಜಪಾಂಗದ ಪ್ರಗತಿಗೆ ಸಹಾಯಕರಾಗಬೇಕು' ಎಂದು ಡಾ. ರಾಧಾಕೃಷ್ಣನ್‌ರವರು ತಿಳಿಸಿದರು.

ಭಾರತದ ಆರ್ಥಿಕ ಪ್ರಗತಿ

'ಈ ಕಷ್ಟಕಾಲದಲ್ಲಿಯೂ ಭಾರತವು ಸಾಧಿಸಿದ ಅಭಿವೃದ್ಧಿಯನ್ನು ಗಮನಿಸಿದರೆ ನಾವು ನಿರಾಶೆ ಹೊಂದಬೇಕಾಗಿಲ್ಲ. ೧೯೩೨ ರಲ್ಲಿ ದೇಶದ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿರದಿದ್ದರೂ ಕೇಂದ್ರ ಸರಕಾರವು ವಿನಿಯಂತ್ರಣವನ್ನು ಸಾಧಿಸಿತು. ಆದರಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಎಷ್ಟೋ ಅಡೆತಡೆಯುಂಟಾಯಿತು. ೧೯೩೨ನೇ ವರ್ಷವನ್ನು ಆಧಾರವಾಗಿಟ್ಟುಕೊಂಡು ಬೆಲೆಗಳನ್ನು ವಿಮರ್ಶಿಸಿದಕೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದುದು ಕಂಡು ಬಾರದಿರದು. ೧೯೩೨ ರಲ್ಲಿ ಬೆಲೆಸೂಚಿಯು ೧೦೦ ಇದ್ದರೆ ಈಗ ಆ ಬೆಲೆ ಮಟ್ಟವು ೧೦೩ ಆಗುತ್ತದೆ. ಈ ಮುಖ್ಯ ವರ್ಷಗಳ ಪ್ರಯತ್ನ ಕಾಲದಲ್ಲಿ

॥ ವಿವಿಧ ವಾರ್ತೆಗಳು ॥

ನಾವು ಅಪಾರವಿಸಿದ ಕಷ್ಟಗಳನ್ನು ಎಣಿಸಿದಕೆ ಅತ್ಯಲ್ಪವಾದ ಈ ಏರಿಕೆಯು ಹೆಚ್ಚೇನಲ್ಲ. ಬೇರೆ ದೇಶಗಳ ಬೆಲೆ ಸೂಚಿಯನ್ನು ಹೋಡಿಸಿದಕೆ ಶೇಕಡ ೧೦೦ರಿಂದ ೧೫೦ರ ವರೆಗೆ ಹೆಚ್ಚಳವಾದದ್ದು ಕಂಡುಬರುತ್ತದೆ' ಎಂದು ಭಾರತದ ಅರ್ಥ ಸಚಿವರಾದ ಶ್ರೀ ಸಿ. ಡಿ. ದೇಶಮುಖರವರು ಹೇಳಿದರು.

ಶ್ರೀ ದೇಶಮುಖರು ಬಸ್ಸೈನ (ಪೂರ್ವ ಬಯಲು) ಪ್ರಾಗರಿಕರನ್ನು ಕುರಿತು 'ಭಾರತದ ಆರ್ಥಿಕ ಅಭಿವೃದ್ಧಿ'ಯ ಬಗ್ಗೆ ಮಾತನಾಡುತ್ತಾ ಮೇಲಿನಂತೆ ಹೇಳಿದರು.

ಅವರನ್ನು ಮುಂದುವರೆದು—'೧೯೪೮ರಲ್ಲಿ ರಾಷ್ಟ್ರದಲ್ಲಿ ನಿರುದ್ಯೋಗತನ ತುಂಬಾ ಹೆಚ್ಚಿದ್ದಿತು. ಈಗ ಆ ಸಮಸ್ಯೆಯು ಪೂರ್ಣ ಪರಿಹಾರವಾಗಿರದಿದ್ದರೂ ಎಷ್ಟೋ ಮಟ್ಟಿಗೆ ಕಡಿಮೆಯಾಗಿಬುತ್ತದೆ. ಅಭಿವೃದ್ಧಿ ಯೋಜನೆಗಳ ಕಾರ್ಯವು ಸುಸೂತ್ರವಾಗಿ ಮುಂದುವರಿದರೆ ಈ ಸಮಸ್ಯೆ ಇನ್ನೂ ಹೆಚ್ಚು ಹಿಗುರವಾಗಬಹುದಾಗಿದೆ.

ನಾವೀಗ ರಾಷ್ಟ್ರವನ್ನು ಅತಿ ಪ್ರಬರ ಣ ಹಾಗೂ ಮುಗ್ಗಟ್ಟಿನಿಂದ ಪಾರು ಮಾಡಬೇಕಾಗಿದೆ. ಮತ್ತು ಆ ಬಗೆಯಲ್ಲಿ ಎಲ್ಲ ಯತ್ನಗಳನ್ನೂ ಮಾಡಲಾಗುತ್ತಿದೆ. ಸರಕಾರದ ಸದ್ಯದ ಧೋರಣೆಯಿಂದ ಮಧ್ಯಮ ವರ್ಗದವರು ಹಾನಿಗೊಳಗಾಗಿದ್ದಾರೆಂದು ಆರೋಪಿಸಲಾಗುತ್ತಿದೆ.

ನಾನು ಈ ತತ್ವವನ್ನು ಒಪ್ಪುವುದಿಲ್ಲ. ಕೇವಲ ಮಧ್ಯಮ ವರ್ಗದ ಜನರ ಹಿತವನ್ನು ಸಾಧಿಸುವುದು ಸಾಧ್ಯವಿಲ್ಲ. ಮಧ್ಯಮ ವರ್ಗದ ಜನರು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಹೋಗಲು ಕಲಿಯಬೇಕು.

ಜನರ ಮೇಲೆ ಕರಭಾರವು ಹೆಚ್ಚಿದೆಯೆಂತಲೂ ಆರೋಪ ಹೊರಿಸಲಾಗುತ್ತಿದೆ. ಬೇರೆ ದೇಶಗಳು ಕರ ಹೇರುವದನ್ನು ಗಮನಿಸಿದರೆ ಈ ಆರೋಪವು ಅಸತ್ಯವಾದುದಾಗಿರುತ್ತದೆ' ಎಂದು ಹೇಳಿದರು.

ಶ್ರೀ ದೇಶಮುಖರವರು ಭಾರತ ಸರಕಾರದ ಸಣ್ಣ ಉಳಿತಾಯ ಯೋಜನೆಯ ಬಗ್ಗೆ ಮಾತನಾಡುತ್ತಾ ಆವು ಯಶಸ್ವಿಯಾಗುತ್ತಿವೆಯೆಂದು ಹೇಳಿದರು. ೩ ವರ್ಷಗಳ ಮುಂದೆ ಈ ಯೋಜನೆಯಿಂದ ಕೇವಲ ೪-೫ ಕೋಟಿ ರೂ. ಗಳು ಬಂದಿದ್ದರೆ ಈಗ ಅದು ೪೪ ಕೋಟಿ ರೂ. ಗಳಿಗೆ ಮುಟ್ಟಿರುವುದು. ಬೇರೆ ಬೇರೆ ಪ್ರದೇಶಗಳಿಗೆ ಹೊಂದುವ ಒಂದು ಯೋಜನೆಯನ್ನು ತಯಾರಿಸುತ್ತಿದ್ದು ಅದು ಪರಿಶೀಲನೆಯಲ್ಲಿದೆಯೆಂತಲೂ ಅವರು ಹೇಳಿದರು.

ಶ್ರೀ ದೇಶಮುಖರು ಸಹಕಾರವಿಕಾಸ ಯೋಜನೆಯ ಬಗ್ಗೆ ಮಾತನಾಡುತ್ತ ಈ ಯೋಜನೆಯು ಯಶಸ್ಸು ಹೆಚ್ಚಾಗಿ ಜನತೆಯ ಸಹಕಾರವನ್ನು ಅವಲಂಬಿಸಿರುತ್ತದೆಯೆಂದು ಹೇಳಿದರು.

'ಯೋಜನೆಗಳು ಕೃಷ್ಟಿಕರವಾಗಿ ಪ್ರಗತಿ ಹೊಂದುತಿದ್ದರೆ ರಿಜರ್ವ್‌ಬೇಂಕು ಕೃಷಿಕರಿಗೆ ನೆರವಾಗಲು ಮುಂದೆ ಬರುವುದರಲ್ಲಿ ಏನೂ ಸಂದೇಹವಿಲ್ಲವೆಂದರು.

ಅಮೇರಿಕದ ಕೃಷಿಯ ನೂತನ ವಿಧಾನ

ಸುಧಾರಿಸಿದ ಕೃಷಿಯ ವಿಧಾನದಿಂದ ಭಾರತವು ತನ್ನ ಮುಖ್ಯ ಆಹಾರವಾದ ಅಕ್ಕಿಯಲ್ಲಿ ಸ್ವಯಂ ಸಮೃದ್ಧಿಯನ್ನು ಪಡೆಯಬಲ್ಲುದಾಗಿದೆಯೆಂದು ಅಮೇರಿಕೆಗೆ ಈಗ ಸಂದರ್ಶನವಿತ್ತಿರುವ ಭಾರತದ ಕೃಷಿಯ ವಿಜ್ಞಾತರು ವಾಷಿಂಗ್‌ಟನ್ನಿನಲ್ಲಿ ಹೇಳಿದರು.

ಹಿಂದೀ ಆಹಾರ ಮತ್ತು ವ್ಯವಸಾಯ ಮಂತ್ರಿ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ಕೆ. ಆರ್. ದಾಮ್ಲೆ ಮತ್ತು ಸರಕಾರಿ ವ್ಯವಸಾಯ ವಿಸ್ತರಣಾ ಕವಿಶಕ್ತರರಾದ ಶ್ರೀ ಎಸ್. ಸಿ. ರಾಯ್ ಅವರು ಪತ್ರಿಕಾಕರ್ತರಿಗೆ, ಹೊಸ ತಾಂತ್ರಿಕ ವಿಧಾನದಿಂದ ಒಂದು ಎಕರೆಯಲ್ಲಿ ಸದ್ಯದ ಆಂ ಪೌಂಡಿನ ಬದಲು ೨ ಸಾವಿರ ಪೌಂಡಿನಷ್ಟು ಅಕ್ಕಿಯನ್ನು ಬೆಳೆಯಬಹುದಾಗಿದೆಯೆಂದು ತಿಳಿಸಿದರು.

'ಈ ಪ್ರಮಾಣದ ಉತ್ಪಾದನೆಯಿಂದ ಭಾರತವು ಅಕ್ಕಿಯಲ್ಲಿ ಸ್ವಯಂ ಸಮೃದ್ಧಿಯನ್ನು ಹೊಂದುವುದಲ್ಲದೆ ಬರಗಾಲದ ಆಂಜಿಕೆಯನ್ನೂ ಹೊಡೆದೋಡಿಸುವುದು. ಭಾರತಕ್ಕೆ ಕೇವಲ ಶೇಕಡಾ ೧೦ರಷ್ಟು ಆಹಾರ ಕೊರತೆಯಿದೆ. ಅಕ್ಕಿಯ ಕೊರತೆಯು ನೀಗಿದಲ್ಲಿ ಗೋದಿಯಂಥ ಉಳಿದ ಧಾನ್ಯಗಳನ್ನು ಅಯಾತ ಮಾಡಿಕೊಳ್ಳಬಹುದಾಗಿದೆ' ಎಂದೂ ಅವರು ಹೇಳಿದರು.

ಭಾರತದಲ್ಲಿ ಅಧಿಕ ಆಹಾರ ಬೆಳೆಯಿರಿ ಅಂದೋಲನದ ಅಂಗವಾಗಿ ಅಮೇರಿಕದಲ್ಲಿ ೩೨ ಜನರ ಹಿಂದೀ ಕೃಷಿಕರ್ತ ಶಿಷ್ಟ ಮಂಡಳವು ೨ ತಿಂಗಳ ಅಧ್ಯಾಪ ಪ್ರವಾಸವನ್ನು ಅಮೇರಿಕದಲ್ಲಿ ಕೈಕೊಂಡಿದೆ. ಶ್ರೀ ದಾಮ್ಲೆ ಮತ್ತು ಶ್ರೀ ರಾಯ್ ಇವರು ಈ ಶಿಷ್ಟ ಮಂಡಳದ ಧುರೀಣರಾಗಿದ್ದಾರೆ. ಅಮೇರಿಕನ್ನರ ಕೃಷಿಯ ವಿಸ್ತರಣಾ ಕಾರ್ಯವನ್ನು ಅಭ್ಯಸಿಸುವ ಮತ್ತು ಅಮೇರಿಕೆಯ ವಿಧಾನವನ್ನೆಷ್ಟರ ಮಟ್ಟಿಗೆ ಭಾರತದಲ್ಲಿ ತರಬಹುದೆಂಬುದನ್ನು ನೋಡುವುದೇ ಈ ಮಂಡಲದ ಮುಖ್ಯ ಉದ್ದೇಶವಾಗಿದೆ.

ಬೆಳೆ ಹೆಚ್ಚಳಕ್ಕೆ ಅಗತ್ಯವಾದ ತಾಂತ್ರಿಕ ಜ್ಞಾನವು ಭಾರತಕ್ಕಿದೆ; ಆದರೆ ಆಂ ಧಾನ್ಯಕಾರಣ ಕೃಷಿಕರಿಗೆ ಹೊಸ ವಿಧಾನವನ್ನೂ ಬಳಕೆಯಲ್ಲಿ ತರಬೇಕೆಂದು ಮನವೊಲಿಸುವುದೇ ಒಂದು ಸಮಸ್ಯೆಯಾಗಿದೆಯೆಂದು ಶ್ರೀ ದಾಮ್ಲೆಯವರು ಹೇಳಿದರು.

'ಭಾರತದಲ್ಲಿ ಸುಮಾರು ೩೦ ಶಿಕ್ಷಣ ಕೇಂದ್ರಗಳನ್ನು ತೆರೆದಿದ್ದು, ಕೃಷಿಕ ಜನಾಂಗದ ಪ್ರತಿನಿಧಿಗಳಿಗೆ ಹೊಸ ವಿಧಾನದಿಂದ ಹೇಗೆ ಹೆಚ್ಚಿನ ಉತ್ಪಾದನೆ ಬರುತ್ತದೆಂಬುದನ್ನು ತೋರಿಸಲಾಗಿದೆ. ಶಿಕ್ಷಣ ಪಡೆದ ಹೊಂದಿದವರು ಹಳ್ಳಿ ಹಳ್ಳಿಗೆ ಹೋಗಿ ತಾವು ಪಡೆದ ಶಿಕ್ಷಣದ ಬಗ್ಗೆ ಜನತೆಗೆ ತಿಳುವಳಿಕೆ ಕೊಡುವರು. ಭಾರತದಲ್ಲಿ ೫,೦೦೦೦ ಹಳ್ಳಿಗಳಲ್ಲಿ ಸುಮಾರು ೭ ಸಾವಿರ ಹಳ್ಳಿಗಳು ತೈಕ್ಷಣಿಕ ಯೋಜನೆಯಲ್ಲಿ ಬರುತ್ತವೆ' ಎಂಬುದಾಗಿಯೂ ಶ್ರೀ ಯುತರು ಹೇಳಿದರು.

ಅಮೇರಿಕದ ಸಂದರ್ಶನದಿಂದ ತಾವು ಬೇಕಷ್ಟು ಅನುಭವ ಹೊಂದಿ ಅದನ್ನು ಭಾರತದಲ್ಲಿ ಆಚರಣೆಗೆ ತರಬಹುದಾಗಿದೆಯೆಂಬ ಅಭಿಪ್ರಾಯವನ್ನು ಈ ಶಿಷ್ಟ ಮಂಡಳದವರು ತಳೆದಿದ್ದಾರೆ.

ಸ್ತ್ರೀಯರು ಪುರುಷರನ್ನು ಅನುಕರಿಸಬಾರದು.

ರಾಧಾಕೃಷ್ಣನ್ನರ ಸೂಚನೆ.

'ಮಹಿಳೆಯರೇ ನೀವು ಎಲ್ಲದರಲ್ಲೂ ಪುರುಷರನ್ನು ಅನುಕರಿಸಲು ಪ್ರಯತ್ನಪಡಬೇಡಿರಿ. ನೀವು ಮಹಿಳೆಯರಾಗಿಯೇ ಉಳಿಯಬೇಕು. ಸ್ತ್ರೀ ಯಾವುದಕ್ಕಾಗಿ ಪೂಜ್ಯಳೋ ಗೌರವಾನ್ವಿತಳೋ ಅದನ್ನು ನೀವು ಅನುಸರಿಸಬೇಕು' ಹೀಗೆಂದು ರಾಷ್ಟ್ರದ ಉಪಾಧ್ಯಕ್ಷ ಶ್ರೀ. ರಾಧಾಕೃಷ್ಣನ್ನರು ಬೊಂಬಾಯಿಯಲ್ಲಿ ಮಹಿಳೆಯರಿಗೆ ಉಪದೇಶಿಸಿದರು.

'ಸ್ತ್ರೀಯರು ಪುರುಷರಂತೆ ವೇಷ ಭೂಷಣಗಳನ್ನು ಧರಿಸುವುದು, ಧೂಮಪಾನ ಮಾಡುವುದು ಗಂಡಸರು ಕ್ರಾಪ್ ಬಿಟ್ಟಂತೆ ತಮ್ಮ ತಲೆಯ ಕೂದಲನ್ನು ಕತ್ತರಿಸಿಕೊಳ್ಳುವುದು, ಇವೆಲ್ಲವನ್ನು ನೋಡಿ ಗಂಡಸರಾರೂ ಹೆಂಗಸರಾರೂ ಎಂಬುದನ್ನು ಗುರುತಿಸುವುದೇ ಕಷ್ಟವಾಗಿ ಹೋಗಿದೆ' ಎಂದು ಶ್ರೀ. ರಾಧಾಕೃಷ್ಣನ್ನರು ತಮ್ಮ ಅನುಭವವನ್ನು ಪ್ರತಿಬಿಂಬಿಸಿದರು.

ಸ್ತ್ರೀಯೊಂದು ಬಗೆಯ ಸೃಷ್ಟಿ ಪುರುಷನೊಂದು ಬಗೆಯ ಸೃಷ್ಟಿ. ಅದ್ದರಿಂದಲೇ ಇಬ್ಬರಲ್ಲಿ ಒಂದು ಸುಂದರವಾದ ವ್ಯೇಮ ಬೆಳೆಯುವದು. ಆದರೆ ಗಂಡಸಿನ ಅನುಕರಣೆಯಲ್ಲಿ ಸ್ತ್ರೀಯು ತನ್ನ ವೈಶಿಷ್ಟ್ಯತೆಯನ್ನು ಕಳೆದುಕೊಳ್ಳಬಾರದು ಎಂದು ಅವರು ಮುಂದುವರಿದು ಹೇಳಿದರು.

ಪುರುಷ ಸ್ವಾಭಾವಿಕವಾಗಿ ಒರಟಾಗಿರುತ್ತಾನೆ ಈ ಒರಟುತನವನ್ನು ಸ್ತ್ರೀ ತನ್ನ ಸಾಧನದಿಂದ ಮೃದುಗೊಳಿಸಬೇಕೆಂದು ಇವರು ಹಿತೋಪದೇಶ ಮಾಡಿದರು.

ಆಂಧ್ರ ಪ್ರಾಂತ್ಯ ಯೋಗ್ಯ ಸಾಧ್ಯ.

ಶ್ರೀ ರಾಜಗೋಪಾಲಾಚಾರ್ಯರ ಭಾಷಣ.

ಕಳೆದ ತಾ. ೨೮ರಲ್ಲಿ ತಮಿಳು ಪಬ್ಲಿಕ್ ವೊಂದರ ಉದ್ಘಾಟನೆ ಮಾಡುತ್ತಾ ಮದ್ರಾಸಿನಲ್ಲಿ ಶ್ರೀ ರಾಜಗೋಪಾಲಾಚಾರ್ಯರು ಬಹಳ ಸರಳ ಹಾಗೂ ಸಂತೋಷದಲ್ಲಿ ಭಾಷಣ ಮಾಡುತ್ತಾ ಹೀಗೆಂದರು:—

'ಆಂಧ್ರರು ಆಂಧ್ರ ಪ್ರಾಂತ ರಚನೆಯ ಪ್ರತ್ನೆಯನ್ನು ವಾದರಾಸ್ ನಗರಪಾಲಿಕೆಯ ಭವಿಷ್ಯದ್ದೊತ್ತನೆ ಬಂಧಿಸಿಹ್ಹಾರೆ. ಇದು

ಒಬ್ಬನ್ನನ್ನು ಒಂದು ಕಂಬಕ್ಕೆ ಕಾನೇ ಕಟ್ಟಿಕೊಂಡು, ಕಂಬವು ತನ್ನನ್ನು ಬಿಡಬೇಕೆಂದು ಹೇಳಿದಂತಾಯಿತು. ಹಗ್ಗವನ್ನು ಅವನು ಕಡಿದು ಹಾಕಿದರೆ ಕಂಬವು ತಬ್ಬನ್ನು ಹೋಗಲು ಬಿಡುವುದು. ಹಾಗೇ ಆಂಧ್ರರಿಗೆ ತಮ್ಮ ಪ್ರಾಂತ ಬೇಕಾದರೆ ಅವರು ಮದ್ರಾಸ್ ನಗರವ ಪ್ರ ಬೇಕು.

ಆಧ್ರರು ಮದ್ರಾಸ್ ನಗರವು ತ. ಪಿಗೆ ಸೇರಬೇಕೆಂದು ಹೇಳುವ ಕಾರಣ ತಮಿಳರು ಸ್ವಲ್ಪ ಭಯಗೊಂಡಂತೆ ತೋ ರುತ್ತದೆ. ಭಯದಿಂದ ಉದ್ದೇಶವೇ ಸಾಂಭವಾಗಬಹುದು. ತಮಿಳು ಸಂತರ ಮ ಸ್ಯ ಕವಿಗಳ ಮೂರುಗಳನ್ನು ಶ್ರೀ ಭಕ್ತ ವತ್ಸಲಂರವರು ಎತ್ತಿ ಹೇಳಿರುವುದನ್ನು ಳೆಳುವಾಗ ಮದ್ರಾಸು ಸಂಪೂರ್ಣ ತಮಿ ಳದೇ ಎಂಬುದು ಸ್ಪಷ್ಟವಾಗುತ್ತದೆ. ಅದರೆ ಮದ್ರಾಸ್ ತಮಿಳರಿಗೆ ಸೇರಿದೆಂ ಬುದಕ್ಕೆ ಸಂತರ ಮತ್ತು ಕವಿಗಳ ಆಧಾರ ಬೇಕಾಗಿಲ್ಲ ಮದ್ರಾಸಿನ ಜನ ಸಂಖ್ಯೆಯಲ್ಲಿ ೧೫ ಲಕ್ಷ ತಮಿಳರು; ೬ ಲಕ್ಷ ತೆಲುಗು ಮಾತಾಡುವವರು; ಉಳಿದ ೪ ಲಕ್ಷ ಇತರ ಭಾಷೆಗಳನ್ನು ಮಾತಾಡುವವರು. ತಮಿ ಳು ನಾಡಿನಲ್ಲಿ ಬಹು ಕಾಲದ ಹಿಂದೆ ಬಂ ಬು ನೆಲೆಸಿದ ಆಂಧ್ರರ ಸಂತತಿಯವರಲ್ಲಿ ಅನೇಕರು ತೆಲುಗನ್ನು ಮರೆತ ಬಿಟ್ಟಿದಾ ರಲ್ಲದೆ, ಅನೇಕರು ತಮಿಳು ಭಾಷೆಯಲ್ಲಿ ಉತ್ತಮ ಗ್ರಂಥಗಳನ್ನು ಕೂಡ ಬರೆದಿರು ವುದು' ಎಂದು ಹೇಳಿದರು.

ವಾರ್ತೆ.

ಸುಮಾರು ನಾಲ್ಕು ವೈಲು ಉದ್ದವಿ ರುವ ವಿಡಿತೆಗಳ ತಂಡವೊಂದು ರಾಜ ಸ್ಥಾನ ಕಡೆಯಿಂದ ಪಂಜಾಬನ್ನು ಪ್ರವೇ ಶಿಸಿ ಸಿನ್ಲೂದ ಹಿಸ್ಸಾರ್ ಜಿಲ್ಲೆಯ ಸಿರಾ ತಾಲೂಕನ್ನು ಆಕ್ರಮಿಸಿರುವುದು. ಈ ವಿ ಡಿತೆಗಳು ಪೆಟ್ಟಿಗೆಗಳನ್ನು ಇಡುತ್ತಾ ಹೋಗುತ್ತಿರುವುವು. ಪಂಜಾಬಿನ ವ್ಯವ ಸಾಯ ಖಾತೆಯವರು ಈ ವಿಡಿತೆಗಳ ಮೂಲವನ್ನು ನಾಶ ಪಡಿಸಲು ಕಾರ್ಯ ಕ್ರಮಗಳನ್ನು ಕೈಕೊಂಡಿರುವರು.

ಇಂಪೋರಿನ ರೆಸಿಡೆನ್ಸಿ ವೈದ್ಯಾನಿನ ಲ್ಲಿ ಕಟ್ಟಲಾಗುತ್ತಿರುವ ಮಂಟಪದಲ್ಲಿ ಸು ಮಾರು ೨೫ ಸಾವಿರ ಜನರು ಕೂಡಲು ಸಾಧ್ಯವಾಗುವಂತೆ. ಈ ಮಂಟಪವು ಬರುವ ಸೆಪ್ಟೆಂಬರ್ ೧೩ ಮತ್ತು ೧೪ ರಲ್ಲಿ ಕೂಡಲಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನದ ಸಲುವಾಗಿದೆ ಯೂಗಿ ಗೊತ್ತಾಗಿದೆ. ಮಂಟಪದೊಗೆ ವ ಳೆ ಬೀಳದಂತೆ ವ್ಯವಸ್ಥೆಯನ್ನೂ ಮಾಡ ಲಾಗಿದೆ.

ಬ್ರಿಟನ್ನಿನ ಅತಿ ದೊಡ್ಡ 'ಪ್ರಿನ್ಸೆಸ್' ಎಂಬ ವಿಮಾನವು ತನ್ನ ಪ್ರಥಮ ಪ್ರಯಾ ಣವನ್ನು ಡಿಕ್ವಾನಲ್ಲಿ ಕಾ. ೨೨ಲ್ಲಿ ಕೈ ಕೊಂಡಾಗ ಅದರ ಹತ್ತು ಇಂಜಿನುಗಳ ಶ ಬ್ದವು ೫ ವೈಲು ದೂರದ ವರೆಗೂ ಕೇಳಿಸುತ್ತಿತ್ತು. ಲಂಡನ್ನಿನಿಂದ ನ್ಯೂಯಾರ್ಕಿಗೆ ೩೫೦೦ ವೈಲು. ಅದು ಎಲ್ಲಿಯೂ ನಿಲ್ಲದೆ ಹಾರಲು ಶಕ್ತವಾಗಿ ದೆ ಅದರ ವೇಗ ಗಂಟೆಗೆ ೩೫೦೦ ವೈ ಲು ದೂರ ಇರುವಷ್ಟು. ಅದು ಸಮುದ್ರದ ಮೇಲೆ ಇಳಿಯಬಲ್ಲದು.

ಶ್ರೀ ವಿನೋಬಾ ಭಾವೆಯವರ ಭೂ ದಾನ ಯಜ್ಞಕ್ಕೆ ಹೈದರಾಬಾದಿನ ನಿಜಾ ಮರು ೩,೭೦೦ ಎಕ್ರೆ ಭೂವಿಸ್ತಾರವನ್ನು ದಾನವಾಗಿ ಕೊಟ್ಟಿರುವರು ಎಂದು ಅಧಿ ಕೃತವಾಗಿ ತಿಳಿಯಬಂತ್ತದೆ.

ಮದ್ರಾಸ್ ಕಾರ್ಪೊರೇಶನ್ನಿನ ಲಾ ನ್ಸಿಲಿನಲ್ಲಿ ಮಂಜಿಮವರಿಗೆ, ಹಿಂದೀ ಕ್ರಿಶ್ಚಿ ಯನ್ನರಿಗೆ ಮತ್ತು ಆಂಗ್ಲೋ-ಇಂಡಿಯ ನ್ನರಿಗೆ ಸ್ಥಳ ಕಾಯ್ದಿರಿಸುವುದು ಯೋ ಗ್ಯವಲ್ಲವೆಂದು ಮದ್ರಾಸ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ

ಮೂರಾಟಕ್ಕಿದೆ.

ಪೀಲಿಬೆಟ್ಟ ತೋಟದ 1952-53ರ ಕಿತ್ತಳೆ ಫಸಲು ಮತ್ತು ಒಳ್ಳೆಮೆಣಸು ಮೂರಾಟಕ್ಕಿದೆ.

ಅಂದಾಜು 10,000 ಕಿತ್ತಳೆ ಮರಗ ಳಲ್ಲಿ ಫಸಲು ಹಿಡಿದಿರುತ್ತದೆ. 500-600 ವೆಣಸಿನ ಬಳ್ಳಿಗಳಲ್ಲಿ ಫಸಲು ಇದೆ. ಖಾಯಂದಾರರು ಸೆಪ್ಟೆಂಬರ್ 15ರ ಒಳಗೆ ಬಂದು ಟೆಂಡರು ಕೊಟ್ಟಲ್ಲಿ ಸ್ವೀಕರಿಸಲ್ಪಡುವುದು. ಹೆಚ್ಚಿನ ವಿವರಗಳನ್ನು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದೂ ಕಛೇರಿಯ ಖುದ್ದಾ ಬಂದು ತಿಳಿಕೊಳ್ಳ ಬಹುದು.

A. A. RODRIGUES,
Proprietor,
Peelibetta Estatate,
Ammatti, Coorg.

2-1

THE COORG TRANSPORT LTD., MERCARA.

Notice is hereby given that all those who may be desirous of taking up the Managing Agency of the above Company may send their offers, setting out the terms on which they are agreable to take up the Managing Agency of the Company on or before the 10th September 1952.

Taking shares of the Company of the value of Rs. 40,000/— (Forty thousand) and above will be considered as one of the grounds of preference when the offers are taken up for consideration.

Sd/ C. M. THIMAYA,
Chairman,
The Coorg Transport Ltd.,
2-2 *Mercara.*

ಶ್ರೀ ಕೆ. ಯಂ. ಪೊಗಪ್ಪನವರು.
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಮೊಳತ್ತು.

ಈಗ ಹೊಸದಾಗಿ ಜಂದಿರುವ್ವನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ ಇದಕ್ಕೆ ಪ್ರತಿಯಾಗಿ 15 ಯೂ 17 ಜ್ಯುವೆಲ್ಲಿಗಳುಳ್ಳ ಸ್ವಿಸ್ ರಜಿತ ರಿಸ್ಟ್‌ವಾಚು, ಸೈಕಲ್, ಆಥವಾ ರೇಡಿಯೋವು ಮಂಫತ್ತಾಗಿ ದೊರೆಯುವುದು. ಇದು ಲಾಟರಿ, ಜೂಜು ಅಥವಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಅರ್ಡರ್ ಮಾಡಿದರೆ ಮಂಫತ್ತು. ಕೆಟಲಾಗು ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K. M.)
P. O. Box No. 4013, BOMBAY—7.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಕ್ಕೂಲುಗಳು.
2. 12ನೇ ನಂಬರಿನ ಒಂಟೆ ಮತ್ತು ಜೋಡು ಹೊಳವಿನ ತೋಪಿಗಳು.
3. 12, 16 ಮತ್ತು 20ನೇ ನಂಬರಿನ ತೋಟಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9" × 4" ಮತ್ತು 8" × 4" ಕಬ್ಬಿಣದ ತೊಲೆಗಳು (Girders)
5. 8' × 3' × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring steel flatts)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್., ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿಟಿ, ವಾರ್ಡರ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Belliappa at 'Kodagu' Press, Mercara, for Kodagu' Ltd.